# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:262 • ನೋಂದಣಿ ನಂ.:KARKAN27911 • ವಿಜಯನಗರ • 14.03.2024 • ಗುರುವಾರ • ಪುಟ:04 • ಬೆಲೆ:2
Volume:01 • Issue:262 • Reg.No:KARKAN27911 • VIJAYANAGARA • 14.03.2024 • Thursday • Page:04 • Rs:2



MASSEY FERGUSON

RRR GROUP RUNNING HARD, DREAMING BIG



ರೈತರಿಗೆ ವಿಜಯಶ್ರೀ ಮೋಟಾರ್ಸ್‌ನಿಂದ
ಮಹಾಕೊಡುಗೆ
ರೈತನ ರಾಜ MF245 (Quadra PTO) ಆಲ್‌ರೌಂಡರ್ ಟ್ರ್ಯಾಕ್ಟರ್ ಖರೀದಿಸಿ,
ಟ್ರ್ಯಾಕ್ಟರ್‌ನೊಂದಿಗೆ 5ರ ಬಲರಾಮ ಮಡಕಿ ಉಚಿತವಾಗಿ ಪಡೆಯಿರಿ

ಉಚಿತ TAFE



TP,
Registration,
Insurance,
LTT
10 ದಿನ ಮಾತ್ರ
* ಷರತ್ತುಗಳು ಅನ್ವಯಿಸುತ್ತವೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ: ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ), ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ–583239, ಮೊ: 9980127607,7353306719


# ಪಕ್ಷಿ ಸಂಕುಲಕ್ಕೆ ನೀರು, ಆಹಾರ ನೀಡಿ

## ವಿ.ಎಸ್.ಕೆ ವಿಶ್ವವಿದ್ಯಾಲಯ ಪ್ರಾಣಿಶಾಸ್ತ್ರ ವಿಭಾಗದಿಂದ ಮಾದರಿ ಕಾರ್ಯಕ್ರಮ

## ಕುಲಪತಿ ಪ್ರೊ.ಕೆ.ಎಂ.ಮೇತ್ರಿ ಹೇಳಿಕೆ । ಪಕ್ಷಿಗಳು ಜೀವಿಸಲು ನೀರು ಧಾನ್ಯ ಇರಿಸಿ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ಬಿಸಿಲಿನ ತಾಪ ಮನುಷ್ಯನ ನೆತ್ತಿ ಸುಡುತ್ತಿದೆ. ಇನ್ನೂ ಪ್ರಾಣಿ–ಪಕ್ಷಿಗಳ ಪಾಡು ಊಹಿಸುವುದು ಕಷ್ಟ. ಇಂತಹ ಕಷ್ಟಕರ ಸ್ಥಿತಿಯಲ್ಲಿ ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ಪಕ್ಷಿ ಸಂಕುಲಕ್ಕೆ ಆಹಾರ, ಜಲ [ಜಲ–ಆಹಾರ ಅಭಿಯಾನ] ವಿತರಿಸುವ ಮಾದರಿ ಕಾರ್ಯಕ್ಕೆ ಮುಂದಾಗಿದ್ದಾರೆ.

ಬಳಸಿ ಬಿಸಾಡಿರುವ ಪ್ಲಾಸ್ಟಿಕ್ ಬಾಟಲಿಗಳು, ಬುಟ್ಟಿ, ತೆಂಗಿನ ಚಿಪ್ಪು ಬೊಂಬಿನ ತುಂಡುಗಳನ್ನು ಬಳಸಿಕೊಂಡು ವಿಶ್ವವಿದ್ಯಾಲಯದ ಜೀವ ವಿಜ್ಞಾನ ಕಟ್ಟಡದ ಆವರಣದಲ್ಲಿರುವ ಮರಗಿಡಗಳಿಗೆ ನೇತು ಹಾಕಿದ್ದಾರೆ. ಇದರಲ್ಲಿ ನೀರು, ಸಿರಿಧಾನ್ಯಗಳನ್ನು ಇರಿಸಿ ಪಕ್ಷಿಗಳಿಗೆ, ಅಳಿಲುಗಳಿಗೆ ಜೀವಸೆಲೆ ಕಲ್ಪಿಸುವ ವಿನೂತನ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಎಂ.ಮೇತ್ರಿ ಅವರು ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಜೀವ ಸಂಕುಲದ ಅತ್ಯಂತ ಕೆಟ್ಟ ಪ್ರಾಣಿ ಎಂದರೆ ಮನುಷ್ಯ. ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡಿ ಹವಾಮಾನ ವೈಪರಿತ್ಯಕ್ಕೆ ಕಾರಣವಾಗಿದ್ದಾನೆ. ಜೀವ ವೈವಿಧ್ಯತೆಗಳನ್ನು



ಕಾಪಾಡಲು ಬೇಸಿಗೆಯಲ್ಲಿ ಅನ್ನಾಹಾರ ಪೂರೈಸುವ ಇಂತಹ ಮಾನವೀಯ ಕಾರ್ಯಕ್ಕೆ ಪ್ರತಿಯೊಬ್ಬರು ಮುಂದಾಗಬೇಕು ಎಂದು ಕರೆ ನೀಡಿದರು.

ಪ್ರಾಣಿಶಾಸ್ತ್ರ ವಿಭಾಗದ ಪ್ರಾಯೋಗಿಕ ಅಧ್ಯಯನಕ್ಕೆ ಈ ಭಾಗದಲ್ಲಿ ಸ್ಥಾಪನೆಯಾಗಿರುವ ಹಂಪಿ ಬಳಿಯ ಅಟಲ್ ಬಿಹಾರಿ ವಾಜಪೇಯಿ ರಾಷ್ಟ್ರೀಯ ಉದ್ಯಾನವನ ಮತ್ತು ದರೋಜಿ ಕರಡಿ ಧಾಮಗಳಿಗೆ ವಿದ್ಯಾರ್ಥಿಗಳನ್ನು ಕರೆದೊಯ್ಯುವುದು ಒಳಿತು ಎಂದು ಕಿವಿಮಾತು ಹೇಳಿದರು.

ಬಿಸಿಲ ನಾಡಿನಲ್ಲಿ ಪ್ರಾಣಿ–ಪಕ್ಷಿ ಸಂಕುಲದ ರಕ್ಷಣೆಗೆ ಮುಂದಾಗಿರುವ ವಿಭಾಗದ ಕೆಲಸಕ್ಕೆ ಹರ್ಷ ವ್ಯಕ್ತಪಡಿಸಿದರು.

ವಿವಿಯ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ವಿಜಯಕುಮಾರ್ ಮಲಶೆಟ್ಟಿ ಮಾತನಾಡಿ, ಆಹ್ಲಾದಕರ ದಿನಚರಿ, ಸಂತೋಷ ಮತ್ತು ಮಾನಸಿಕ ನೆಮ್ಮದಿ ನಮ್ಮಲ್ಲಿ ಕಂಡುಕೊಳ್ಳಲು ಪರಿಸರ ಕಾಳಜಿಯಂತಹ ಸೇವೆಗಳಿಂದ ಸಾಧ್ಯವಾಗುತ್ತದೆ. ಲವಲವಿಕೆಯ ಜೀವನಶೈಲಿಯು ಸ್ವಚ್ಛಂದ ಪರಿಸರದಿಂದ ನಿರ್ಮಾಣವಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷಿಗಳಿಗೆ 'ಜಲ–ಆಹಾರ ಅಭಿಯಾನ' ವನ್ನು ವಿಶ್ವವಿದ್ಯಾಲಯದ ಆವರಣದಾದ್ಯಂತ ವಿಸ್ತರಿಸುವ ಕಾರ್ಯವನ್ನು ಶೀಘ್ರವೇ ಆರಂಭಿಸುತ್ತೇವೆ ಎಂದರು.

ವಿದ್ಯಾರ್ಥಿಗಳು ಮರಗಿಡಗಳಲ್ಲಿ ನೇತು ಹಾಕಿದ್ದ ಬುಟ್ಟಿಗಳಿಗೆ ಆಹಾರ ಧಾನ್ಯಗಳನ್ನು ಮತ್ತು ನೀರನ್ನು ತುಂಬಿಸಿದರು.

ಈ ವೇಳೆ ವಿಶ್ವವಿದ್ಯಾಲಯದ ಕುಲಸಚಿವ ರುದ್ರೇಶ್. ಎಸ್.ಎನ್., ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್ ಓಲೇಕಾರ್, ವಿತ್ತಾಧಿಕಾರಿ ಪ್ರೊ.ಸದ್ಯೋಜಾತಪ್ಪ, ಸಿಂಡಿಕೇಟ್ ಸದಸ್ಯರುಗಳಾದ ರಮೇಶ್ ಸವದಿ, ಡಾ.ರಾಜಶೇಖರ್, ಡಾ.ರಾಮಕೃಷ್ಣ, ಡಾ.ಅನ್ನಪೂರ್ಣ, ಶೇಖ್ ಸಲೀಂ ಭಾಷಾ, ಪ್ರಾಣಿಶಾಸ್ತ್ರ ವಿಭಾಗದ ಪ್ರೊ.ಶಶಿಕಾಂತ್ ಮಜಗಿ, ಡಾ.ನಾಗಭೂಷಣ್ ಸಿ., ಸ್ನೇಹಾ ಸುಮಾ ಹೆಗಡೆ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

### ಮೈಕ್ರೋ ನ್ಯೂಸ್

## ಮಾ.14ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**
ಜೆಸ್ಕಾಂ ಕಮಲಾಪುರದ 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಪ್ರಯುಕ್ತ ಮಾರ್ಚ್ 14 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅಂದು ಕಮಲಾಪುರ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ ಗ್ರಾಮ ಪಂಚಾಯಿತಿ, ಸೀತರಾಮ ತಾಂಡ ಗ್ರಾಮ ಪಂಚಾಯಿತಿ, ಮಲಪನಗುಡಿ ಗ್ರಾಮ ಪಂಚಾಯಿತಿ, ಹಂಪಿ ಗ್ರಾಮ ಪಂಚಾಯಿತಿ, ಪಾಪಿನಾಯಕನಹಳ್ಳಿ ಗ್ರಾಮ ಪಂಚಾಯಿತಿ, ಗಾದಿಗನೂರು ಗ್ರಾಮ ಪಂಚಾಯಿತಿ ಮತ್ತು ಬೈಲುವದ್ದಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಹಾಗೂ ರೈತ ಬಾಂಧವರು ಸಹಕರಿಸಬೇಕು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.


ಬೇಕಾಗಿದ್ದಾರೆ
ಶಾನಭಾಗ ಟವರ್ಸ್‌ನಲ್ಲಿ ಹಾಜರಿ ಹೆಬ್ಬಟ್ಟು ಮಿಷನ್ ಹಾಕುವವರು ಬೇಕಾಗಿದ್ದಾರೆ.
ಮೂರರಿಂದ ನಾಲ್ಕು
Biometric Fingerprint
Time & Attendance Machine
ಮಷಿನ್ ಹಾಕಬೇಕಿದೆ. ಸರ್ವಿಸ್ ನೀಡಲಿಚ್ಚಿಸುವವರು ಸಂಪರ್ಕಿಸಿ.
ಶಾನಭಾಗ ಟವರ್ಸ್
ನ್ಯಾಷನಲ್ (ಪ್ರೈ) ಲಿಮಿಟೆಡ್
ಶಾನಭಾಗ ಸರ್ಕಲ್, ಹೊಸಪೇಟೆ–583201
9482147421
9449193615



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


## ಶ್ರೀವಾಸವಿ ಮಹಿಳಾ ಮಂಡಳಿಯಿಂದ ಬಾಣಂತಿಯರಿಗೆ ಹಣ್ಣು, ಹಾರ್ಲಿಕ್ಸ್ ವಿತರಣೆ




**ಹಂಪಿ ಟೈಮ್ಸ್ ಹೊಸಪೇಟೆ**
ಶ್ರೀ ವಾಸವಿ ಮಹಿಳಾ ಮಂಡಳಿ (ರಿ) ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಇಲ್ಲಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿನ ಬಾಣಂತಿಯರಿಗೆ ಹಣ್ಣು, ಬಿಸ್ಕೆಟ್, ಹಾರ್ಲಿಕ್ಸ್ ಪೌಡರ್ ಮತ್ತು ಬೆಡ್ ಶೀಟ್‌ಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಮಂಡಳಿಯ ಅಧ್ಯಕ್ಷೆ ಜಯಲಕ್ಷ್ಮಿ ಅರಳಿಹಳ್ಳಿ, ಸುಪರ್ಣ ದೊಡ್ಡಮನಿ ಹಾಗೂ ಸಮಿತಿ ಸದಸ್ಯರಾದ ಲತಾ ಅರಳಿಹಳ್ಳಿ, ಸೌಮ್ಯ ದೊಡ್ಮನಿ, ಮಂಜುಳಾ ಭೂಪಾಳ್, ಶೀತಲ್ ಭೂಪಾಳ್, ಚಿನ್ನಿ ಲಕ್ಷ್ಮಿ, ಶಿದ್ದಂಶೆಟ್ಟಿ ಲತಾ ಹಾಗೂ ಲಕ್ಷ್ಮಿ ಸೇರಿದಂತೆ ಸದಸ್ಯರು ಭಾಗವಹಿಸಿದ್ದರು.

## ಶ್ರೀ ಒಪ್ಪತ್ತೇಶ್ವರಸ್ವಾಮಿ ಮಠದ ಭಕ್ತರಿಂದ ರಕ್ತದಾನ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಸಮೀಪದ ಗರಗ ನಾಗಲಾಪುರ ಶ್ರೀ ಒಪ್ಪತ್ತೇಶ್ವರ ಸ್ವಾಮಿ ವಿರಕ್ತ ಮಠದ ನಿರಂಜನ ಪ್ರಭುದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನಿಮಿತ್ತ ರಕ್ತದಾನ ಶಿಬಿರ ನಡೆಯಿತು. ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಿರಂಜನ ಪ್ರಭುದೇಶಿಕರು, ತಾ.ಆರೋಗ್ಯಾಧಿಕಾರಿ ಭಾಸ್ಕರ್, ಆರೋಗ್ಯ ನಿರೀಕ್ಷಣಾಧಿಕಾರಿ ಅನಿಲ್, ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಶಾರದಾ, ಆಶಾಕಾರ್ಯಕರ್ತೆಯರಾದ ದಾಕ್ಷಾಯಿಣಿ, ನಾಗರತ್ನ, ರೇಣುಕಾ, ವಿಮ್ಸ್ ರಕ್ತ ಭಂಡಾರದ ಜಗದೀಶ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸ್ಥಳೀಯರಾದ ಗಂಡಿಬಸವರಾಜ, ಗುರಿಕಾರ್ ಸತೀಶ್, ಹೆಚ್.ಎಂ.ಚಂದ್ರಶೇಖರ,ಕೊಟ್ರೇಶ್, ಸದ್ಯೋಜಾತ ಶಾಸ್ತ್ರಿ, ಶಂಕ್ರಯ್ಯ, ಮಧುರಚೆನ್ನ ಶಾಸ್ತ್ರಿ, ಅಣ್ಣಿ ಪಂಪಾಪತಿ, ರಾಜಗೋಪಾಲ್ ರೆಡ್ಡಿ, ಬಾರಿಕಾರ ಸೋಮಣ್ಣ, ಗಾದ್ರಿ ಗಿರಿ, ಗ್ರಾಮ ಪಂಚಾಯತಿ ಸದಸ್ಯ ಅಂಜಿನಪ್ಪ, ಕಲ್ಲವನರ ಒಪ್ಪತ್ತೇಪ್ಪ, ಶಿವಮೂರ್ತಿ ಸ್ವಾಮಿ ಸೇರಿದಂತೆ ಇತರರಿದ್ದರು. ನೂರಕ್ಕೂ ಅಧಿಕ ಜನ ರಕ್ತದಾನ ಮಾಡಿದರು.



## ಪಿಎಂ–ಸೂರಜ್ ಪೋರ್ಟಲ್‌ಗೆ ಪ್ರಧಾನಿ ಮೋದಿ ಚಾಲನೆ

### ಕೆನರಾ ಬ್ಯಾಂಕ್ ಜಿಲ್ಲಾ ಮಾರ್ಗದರ್ಶಿ ವ್ಯವಸ್ಥಾಪಕ ಸೋಮನಗೌಡ ಐನಾಪುರ ಹೇಳಿಕೆ

### 15 ಲಕ್ಷ ರೂ. ಗಳವರೆಗೆ ಸಾಲಕ್ಕೆ ಅರ್ಜಿ ಸಲ್ಲಿಸಬಹುದು । ಬ್ಯಾಂಕ್‌ಗೆ ಭೇಟಿ ನೀಡುವ ಅಗತ್ಯವಿಲ್ಲ



**ಹಂಪಿ ಟೈಮ್ಸ್ ಬಳ್ಳಾರಿ**
ಪ್ರಧಾನಿಮಂತ್ರಿಗಳಾದ ನರೇಂದ್ರ ಮೋದಿ ಅವರು ಇಂದು, ಸಮಾಜದ ಕಟ್ಟಕಡೆಯ ವರ್ಗಗಳಿಗೆ ಸಾಲದ ಬೆಂಬಲವನ್ನು ಒದಗಿಸುವ ರಾಷ್ಟ್ರವ್ಯಾಪಿ ಉಪಕ್ರಮವಾದ 'ಪ್ರಧಾನ ಮಂತ್ರಿ ಸಾಮಾಜಿಕ್ ಉತ್ಥಾನ್ ಮತ್ತು ರೋಜ್ಗಾರ್ ಆಧಾರಿತ್ ಜನಕಲ್ಯಾಣ್' (ಪಿಎಂ–ಸೂರಜ್) ರಾಷ್ಟ್ರೀಯ ಪೋರ್ಟಲ್ ಅನ್ನು ಪ್ರಧಾನ ಮಂತ್ರಿ ಕಚೇರಿಯಿಂದ ವರ್ಚುಯಲ್ ಮೂಲಕ ಚಾಲನೆ ನೀಡಿದರು.

ಬಳಿಕ ಫಲಾನುಭವಿಗಳನ್ನುದ್ದೇಶಿಸಿ ವರ್ಚುವಲ್ ಸಂವಾದ ಮೂಲಕ ಮಾತನಾಡಿದ ಅವರು, ಪರಿಶಿಷ್ಟ ಜಾತಿ ವರ್ಗಗಳು, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ನಮ್ಮ ಸರ್ಕಾರವು ಬದ್ಧವಾಗಿದೆ ಎಂದರು.

ರಾಷ್ಟ್ರೀಯ ನಿಗಮಗಳ ಯೋಜನೆಯ (ಪರಿಶಿಷ್ಟ ಜಾತಿಗಳು, ಸಫಾಯಿ ಕರ್ಮಚಾರಿಗಳು ಮತ್ತು ಹಿಂದುಳಿದ ವರ್ಗಗಳ) ಫಲಾನುಭವಿಗಳೊಂದಿಗೆ ವಿಡಿಯೋ ಸಂವಾದ ನಡೆಸಿ, ಫಲಾನುಭವಿಗಳ ಅಭಿಪ್ರಾಯ ಪಡೆದುಕೊಂಡರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಮಾತನಾಡಿ, ಪಿಎಂ ಸೂರಜ್ >>4


COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089





9880956386
ವಿದ್ಯೆ ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ–ಪುರುಷ ಪ್ರೇಮವಿವಾಹಕ್ಕೆ ಯಂತ್ರ ಪೂಜೆ, ಮಾಟ–ಮಂತ್ರ ಸೇರಿದಂತೆ ಯಾವುದೇ ಸಮಸ್ಯೆಗಳಿದ್ದರೂ ಶೀಘ್ರ ಹಾಗೂ ಶಾಶ್ವತ ಪರಿಹಾರ ಶತಸಿದ್ಧ.
ಸಂಪರ್ಕಿಸಿ: ಪಂ.ಪೊದುವಾಳ್ ಎಸ್.ಜಿ.ಅಣ್ಣಪ್ಪ ಕುಮಾರನ್,
ಶ್ರೀಸಿದ್ಧಿವಿನಾಯಕ ದೇವಸ್ಥಾನ ಹತ್ತಿರ(ಮನೆ),
ಹೊಸಪೇಟೆ, ವಿಜಯನಗರ ಜಿಲ್ಲೆ

## ವಚನ ಅರಿವು

### ಅರಿವು ಗುರು

**ಅರಿಯದ ಗುರು ಅರಿಯದ ಶಿಷ್ಯಂಗೆ**
**ಅನುಗ್ರಹವ ಮಾಡಿದಡೇನಪ್ಪುದೆಲವೋ.**
**ಅಂಧಕನ ಕೈಯನಂಧಕ ಹಿಡಿದಡೆ**
**ಮುಂದನಾರು ಕಾಬರು ಹೇಳಲೆ ಮರುಳೆ.**
**ತೊರೆಯಲದ್ದವನನೀಸಲರಿಯದವ**
**ತೆಗೆವ ತೆರನಂತೆಂದನಂಬಿಗ ಚೌಡಯ್ಯ.**

**– ಅಂಬಿಗರ ಚೌಡಯ್ಯ**

ಶರಣತತ್ವವನ್ನು ಅರಿಯದೆ ಗುರುವೆಂದು ಹೇಳಿಕೊಂಡು ಏನೂ ತಿಳಿಯಲಾರದ ಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಅವರಿಗೆ ಲಿಂಗ ಧಾರಣೆಯನ್ನು ಮಾಡುವುದು ಅವರಿಗೆ ಅರಿವಿನ ದಾರಿ ತೋರುತ್ತೇವೆ ಎಂದು ದಾರಿ ತಪ್ಪಿಸುವವನು ಗುರುವಲ್ಲ. ಅಂಥವನು ಕುರುಡನೊಬ್ಬ ಇನ್ನೊಬ್ಬ ಕುರುಡನ ಕೈಹಿಡಿದು ನಡೆಸಿದಂತಾಗುತ್ತದೆ. ಇಬ್ಬರಿಗೂ ದಾರಿ ಕಾಣುವುದಿಲ್ಲ ಇನ್ನೂ ನಡೆಯುವುದೇಗೆ? ನೀರಿನಲ್ಲಿ ಬಿದ್ದು ಕೊಚ್ಚಿಕೊಂಡು ಹೋಗುವವನನ್ನು ಈಸಲು ಬರಲಾರದವನೊಬ್ಬ ನೀರಿಗೆ ಇಳಿದು ಹೊರ ತೆಗೆಯಲು ಹೋದರೆ ಅವನು ಬರುವುದಿಲ್ಲ, ಇವನು ಬರುವುದಿಲ್ಲ. ಅಂದರೆ ತಿಳಿಯಲಾರದ ಗುರು, ತಿಳಿಯಲಾರದ ಶಿಷ್ಯ ಇಬ್ಬರಿಗೂ ಅರಿವು ಕಾಣದೆ ಮುಳುಗಿ ಹೋಗುತ್ತಾರೆ.
ಸಾಧನೆಗೆ ಇಬ್ಬರು ಬಹಳ ಮುಖ್ಯ. ಶರಣರ ವಿಚಾರಗಳನ್ನು ಅರಿತು ಆಚರಿಸಿ, ಆಚಾರವನ್ನು ಅರಿತಿರುವ ಗುರು, ಅರಿಯಬೇಕೆಂಬ ಹಂಬಲ, ನಿಷ್ಠೆ, ನಂಬಿಕೆ ಉಳ್ಳ ಶಿಷ್ಯ (ಅರಿತ ಮೇಲೆ ಶಿಷ್ಯನು ಗುರುವಾಗುತ್ತಾನೆ.) ಎನ್ನುತ್ತಾನೆ ಅಂಬಿಗರ ಚೌಡಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ನಿಷ್ಕಲ್ಮಶ ಸ್ನೇಹ ಎಂದರೆ ಇದುವೇ



■ **ಲೀಲಾವತಿ ಶೀವನಗೌಡ್ರು ಅಂಕಸಮುದ್ರ**

ಕೃಷ್ಣ – ಸುಧಾಮರು, ಉಜ್ಜೈನಿಯ ಸಾಂದೀಪನಿ ಮುನಿಯ ಆಶ್ರಮದಲ್ಲಿ ಶಿಕ್ಷಣ ಪಡೆಯುತ್ತಿದ್ದ ಸಮಯ. ಆಗಿನ ಗುರುಕುಲ ವ್ಯವಸ್ಥೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ, ಬೇಧವಿರದ ಸಮಾನವಾದ ಸ್ಥಾನಮಾನವೇ ಇತ್ತು. ಅದರಂತೆ ಕೃಷ್ಣ-ಸುಧಾಮರು, ವನ ಸಂಚಾರಕ್ಕೆ ಹೋದಾಗ, ದಾರಿ ತಪ್ಪಿ, ಹಸಿವೆ-ಬಾಯಾರಿಕೆಯಿಂದ ಸ್ನೇಹಿತರಿಬ್ಬರೂ ಬಳಲಿದರು. ಆಗ ಒಂದು ಫಲಭರಿತ ಮರ ಕಾಣಿಸಿದ್ದರಿಂದ, ಕೃಷ್ಣ ಮರ ಹತ್ತಿ ಹಣ್ಣನ್ನು ಕಿತ್ತು, ಅಭ್ಯಾಸದಂತೆ ತುಣುಕು ಮಾಡಿ, ಹಣ್ಣಿನ ಮೊದಲನೆಯ ತುಣಕನ್ನು ಸುಧಾಮನಿಗೆ ಕೊಟ್ಟನು. ಸುಧಾಮನು, " ಈ ಹಣ್ಣು ತುಂಬಾ ಸ್ವಾದಿಷ್ಟಕರ, ಸಿಹಿಯಾಗಿದೆ" ಎಂದು ಹೇಳಿ, ಒಂದರ ನಂತರ ಒಂದು ಹಣ್ಣಿನ ಎಲ್ಲಾ ತುಣುಕು ತಿನ್ನತೊಡಗಿದ. ಕೊನೆಗೆ ಒಂದೇ ತುಣುಕು ಉಳಿದಾಗ, ಕೃಷ್ಣನು ಸುಧಾಮನಿಗೆ, "ನಿನ್ನಂತೆ ನನಗೂ ಹಸಿವೆಯಾಗಿದೆ. ಸ್ನೇಹಿತನಾಗಿ ನಾನು ನಿನ್ನ ಆಧರಿಸುವೆ. ಆದರೆ ನಿನಗೆ ನನ್ನ ಬಗ್ಗೆ ಆಧರವಿಲ್ಲ". ಎಂದು ತಾನೇ ಹಣ್ಣಿನ ಕೊನೆ ತುಣುಕನ್ನು ಬಾಯಿಗೆ ಹಾಕಿಕೊಂಡು ಬಿಟ್ಟನು. ತಕ್ಷಣವೇ ಅದನ್ನು ಉಗಿದು, "ಇಂತಹ ಕಹಿಯಾದ ಹಣ್ಣನ್ನು ಹೇಗೆ ತಿಂದೆ ಸುಧಾಮ?"ಎಂದಾಗ, ಸುಧಾಮನು, " ಕೃಷ್ಣ ನಿನ್ನ ಅಮೃತ ಹಸ್ತದಿಂದ, ಸಾವಿರಾರು ಸಿಹಿಯಾದ ಹಣ್ಣುಗಳನ್ನು ತಿಂದಿರುವೆ. ಈಗ ಒಮ್ಮೆ ಮಾತ್ರ ಹಣ್ಣು ಕಹಿಯೆನೆನಿಸಿದ ಮಾತ್ರಕ್ಕೇ, ನಿನ್ನ ದೂರುವುದು ಸರಿಯಲ್ಲ. ನೀನು ಎಂದೂ ಕಹಿಯಾದುದನ್ನು ತಿನ್ನಬಾರದೆಂದೇ ನಾನೇ ಎಲ್ಲವನ್ನು ತಿಂದುಬಿಟ್ಟೆ"ಎಂದು ಹೇಳಿದನು.



ಸರ್ವಾಂತರ್ಯಾಮಿಯಾದ ಕೃಷ್ಣನಿಗೆ ಅದು ತಿಳಿಯಲಾರದೇನಲ್ಲ. ಸಮಸ್ತವನ್ನೂ ತಿಳಿದವನೇ ಕೃಷ್ಣ!! ಅಂತರ್ಯಾಮಿಯಾದ ಸುಧಾಮನೂ ಕೃಷ್ಣನನ್ನು ಅರಿತವನೇ!! ಅವರೀರವರೂ ತಮ್ಮ ನಿಷ್ಕಲ್ಮಶ ಸ್ನೇಹ ಅಳವನ್ನು, ಮಹತ್ವವನ್ನು ಜಗತ್ತಿಗೆ ತೋರಿಸಬೇಕಿತ್ತು. ಅದರಂತೆಯೇ "ಎಲ್ಲಿ ನೈಜ ಸ್ನೇಹವಿದೆ, ಅಲ್ಲಿ ಗಟ್ಟಿತನವಿದೆ" ಎಂದು ತೋರಿಸಿಕೊಟ್ಟರು "ಕೃಷ್ಣ – ಸುಧಾಮ"ರು. ದ್ವಾಪರಯುಗದಿಂದ ಪ್ರಸ್ತುತ ದಿನದಲ್ಲೂ, "ಗೆಳೆತನ ಎನ್ನುವುದು, ಬೇಕು ಎನಿಸಿದಾಗ ಮಾತ್ರ ವ್ಯಕ್ತವಾಗುವ ಮಿಥ್ಯ ಭಾವದ ಆವಶ್ಯಕತೆಯಲ್ಲ, ಅದನ್ನು ಮೀರಿದ ಬೆಸೆದ ಹೃದಯದ ಭಾವ. ಎಲ್ಲಾ ತಿಳಿದು ತಿಳಿಯದಂತಿದ್ದು, ಎಲ್ಲವನ್ನೂ ಸ್ನೇಹಿತನಿಗೆ ನೀಡಿದ ಸ್ನೇಹಿತ ಕೃಷ್ಣ. ತನ್ನ ದ್ವಾರಕೆಗಿಂತ ವೈಭವಯುತವಾಗಿ, ತನ್ನ ಸುಧಾಮನಿಗೆ ನಗರ ನಿರ್ಮಿಸಿದೆಂದು ವಿಶ್ವಾಮಿತ್ರರಿಗೆ ಹೇಳಿದವರು ಸ್ನೇಹಿತ ಕೃಷ್ಣ. ಆದರೆ ಇದಾವುದೂ ತಿಳಿಯದೇ, ತನ್ನ ನಿಷ್ಕರುಣ ಸಂಕಟ ಸಮಯದಲ್ಲೂ ಏನನ್ನೂ ಕೇಳದ ಸುಧಾಮರು ಸ್ನೇಹಕ್ಕೆ ಅಪ್ರತಿಮರು. ಪ್ರಸ್ತುತಕ್ಕೂ ಆದರ್ಶನೀಯರು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ನುಡಿಗೆ ಚೆಲುವು



ಗದಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಯವರ ಹಠಾತ್ ಮರಣ, ಬಸವತತ್ವವಾದಿಗಳಿಗೆ ಸಹಜವಾಗಿಯೇ ದುಗುಡ ತಂದಿದೆ. ಸ್ವಾಮೀಜಿ ಲಿಂಗಾಯತ ಚಳುವಳಿಯ ನೇತಾರರು ಮಾತ್ರವಲ್ಲ, ಅದಕ್ಕೆ ತಕ್ಕ ದಿಸೆ ಕೊಡಬಲ್ಲ ಸಿದ್ಧಾಂತಿಗಳಲ್ಲೂ ಒಬ್ಬರಾಗಿದ್ದರು. ಆಂದೋಲನಕ್ಕೆ ಬೇಕಾದ ತಾತ್ವಿಕ ಸ್ಪಷ್ಟತೆ, ಅಧ್ಯಯನ ಮತ್ತು ಚಿಂತನೆ ಅವರಲ್ಲಿದ್ದವು. ಇವುಗಳ ಹಿಂದೆ ಎಂ.ಎ. ಕಲಬುರ್ಗಿಯವರ ಸಂಶೋಧನೆ ಮತ್ತು ವಿಚಾರಗಳಿದ್ದವು. ಆದರೆ ಸಾಮಾಜಿಕ ಪ್ರಜ್ಞೆ ದೃಷ್ಟಿಯಿಂದ ಅವರು ತಮ್ಮ ತರಗತಿಯ ಗುರುಗಳಾದ ಕಲಬುರ್ಗಿಯವರಿಗಿಂತ ಹೆಚ್ಚು ವಿಶಾಲಮನಸ್ಕರಾಗಿದ್ದರು; ನಾಡಿನ ಜನಪರ ಚಳುವಳಿಗಳಲ್ಲಿ ಆಕ್ಟಿವಿಸ್ಟಾಗಿ ಭಾಗವಹಿಸುತ್ತಿದ್ದರು. 'ಉಳ್ಳವರು ಶಿವಾಲಯವ ಮಾಡುವರು' ವಚನ ರಚಿಸಿದ ಬಸವಣ್ಣನವರ ಹೆಸರನ್ನು ಹೇಳುತ್ತಲೇ ಗುಡಿಕಟ್ಟುವ ಅಜೆಂಡಾವುಳ್ಳ ಮತೀಯ ರಾಜಕಾರಣದ ಜತೆ ಲಿಂಗಾಯತರು ಕೈಗೂಡಿಸುತ್ತಿರುವಾಗ, ಅವರು ಬಸವತತ್ವವನ್ನು ಕರ್ನಾಟಕದ ಕೋಮುವಾದ ವಿರೋಧಿ ಚಳುವಳಿಯ ಜತೆ ಬೆಸೆದರು; ಗೋಕಾಕ್ ಚಳುವಳಿಯಲ್ಲಿ ಪಾಟೀಲ ಪುಟ್ಟಪ್ಪ, ರಾಜಕುಮಾರ್, ಚನ್ನವೀರ ಕಣವಿ, ಚಂಪಾ ಅವರ ಜತೆಗೂಡಿ ಕೆಲಸ ಮಾಡಿದರು; ಪೊಸ್ಕೊ ಕಂಪನಿಗಾಗಿ ರೈತರ ಭೂಮಿ ವಶಪಡಿಸಿಕೊಳ್ಳುವ ಯೋಜನೆ ಮತ್ತು ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ಮಾಡುವುದನ್ನು ವಿರೋಧಿಸುವ ಚಳುವಳಿಗಳನ್ನು ಮುನ್ನಡೆಸಿದರು. ಮೌಢ್ಯವಿರೋಧಿ ವೈಚಾರಿಕ ಚಳುವಳಿಯಲ್ಲೂ ಅವರ ಪಾತ್ರವಿತ್ತು. ಹೀಗಾಗಿಯೇ ಮಠ ಮತ್ತು ಮಠಾಧಿಪತಿಗಳೆಂದರೆ ದೂರವಿರುತ್ತಿದ್ದ ಅನೇಕ ಚಿಂತಕರು-ಲೇಖಕರು, ಅವರ ಜತೆ ಗುರುತಿಸಿಕೊಳ್ಳಲು ಸಾಧ್ಯವಾಯಿತು. ತೋಂಟದಾರ್ಯರು ಚಳುವಳಿಗಳ ಸಖನಾಗಿದ್ದರು.

ತೋಂಟದಾರ್ಯರು ಒಳ್ಳೆಯ ವಾಗ್ಮಿಯಾಗಿದ್ದರು. ನೆರೆದ ಸಭೆಯನ್ನು ವಶೀಕರಿಸಿಕೊಂಡು ಭಾಷಣ ಮಾಡುವ ಅನೇಕ ಮಾತುಗಾರರಿದ್ದಾರೆ. ಅವರಲ್ಲಿ ಹುಸಿರಾಷ್ಟ್ರೀಯತೆ ಮತ್ತು ಮತೀಯ ನಂಜನ್ನು ತುಂಬುವವರು; ಪ್ರತಿರೋಧದ ಕಸುವಿಲ್ಲದ ಸುಂದರವಾದ ಆದರ್ಶ ಬಿತ್ತುವವರು; ಪರಿಸ್ಥಿತಿ ಎದುರಿಸಲು ಬೇಕಾದ ಎಚ್ಚರ ಪ್ರಜ್ಞೆಯನ್ನೂ ದಿಟ್ಟತನವನ್ನೂ ತುಂಬುವ ಬದಲು, ಹೊಂದಾಣಿಕೆ ಮಾಡಿಕೊಂಡು ಬದುಕುವುದು ಹೇಗೆಂದು ಕಲಿಸುವವರು ಕೂಡ ಇದ್ದಾರೆ. ಜನರನ್ನು ದ್ವೇಷಕೇಂದ್ರಿತ ದೇಶಭಕ್ತಿ ಮತ್ತು ಮತಾಭಿಮಾನದ ಅಮಲನ್ನು ಕುಡಿಸುವುದು, ವ್ಯವಸ್ಥೆಯನ್ನು ಕದಡದೆ ಇಕ್ಕಟ್ಟಿನಲ್ಲೇ ಬದುಕುವ ಕಲೆ ಹೇಳಿಕೊಡುವುದು ಸುಲಭ. ಪೂರ್ವಸಂಚಿತ ಗ್ರಹಿಕೆಗಳನ್ನು ಒಡೆದು ಮನಸ್ಸನ್ನು ಉತ್ತಿ ವಿಚಾರದ ಬೀಜ ಬಿತ್ತುವುದು, ಪ್ರವಾಹಕ್ಕೆ ಎದುರು ಈಸುವುದು ಕಷ್ಟ. ಎ.ಕೆ. ಸುಬ್ಬಯ್ಯ, ಕೆ. ರಾಮದಾಸ್, ಕಿರಂ, ತೋಂಟದಾರ್ಯ ಮೊದಲಾದವರು ಎರಡನೇ ಮಾದರಿಯ ವಾಗ್ಮಿಗಳು. ಹೀಗಾಗಿಯೇ ಇವರ ಮಾತುಗಾರಿಕೆ ಮತ್ತು ಜನ ಪ್ರಿಯತೆಗಳಿಗೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮಹತ್ವ ಪ್ರಾಪ್ತವಾಗಿದೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ತೋಂಟದಾ ರ್ಯರ ಭಾಷಣಗಳಲ್ಲಿ ಗದಗ ಬಿಜಾಪುರ ಬನಿಯುಳ್ಳ ಕನ್ನಡವು ತನ್ನ ದೇಸೀ ಲಯಗಾರಿಕೆಯಲ್ಲಿ ಹೊಮ್ಮುತ್ತಿತ್ತು. ಶಿವಮೊಗ್ಗೆಯಲ್ಲಿ, ಹಿರೇಹಾಳ್ ಇಬ್ರಾಹಿಂ ಸಾಹೇಬರ ಸನ್ಮಾನ ಸಮಾರಂಭದಲ್ಲಿ ಅವರು ಮಾಡಿದ ಭಾಷಣವು, ಸಂಗೀತ ಕಛೇರಿಯಂತಿತ್ತು. ಒಳ್ಳೆಯ ಊಟವನ್ನು ಉಂಡವರು ಅದನ್ನು ಬಹುಕಾಲ ಸ್ಮರಿಸುವಂತೆ, ಶಿವಮೊಗ್ಗೆಯ ಮಂದಿ ಅದನ್ನು ಪ್ರಸ್ತಾಪಿಸುತ್ತಿದ್ದರು. ಮಂಗಳೂರಿನಲ್ಲಿ ಕೋಮುಸೌಹಾರ್ದ ಚಳುವಳಿಯ ವೇದಿಕೆಯಿಂದ ಅವರ ಭಾಷಣ ಕೇಳಿದ್ದ ಗದ್ಯಲೇಖಕ ಜಿ. ರಾಜಶೇಖರ್ ಬೆರಗಾಗಿ 'ಛೇ! ಅವರ ಜೀವಂತ ಕನ್ನಡದ ಮುಂದೆ ನಮ್ಮ ಕನ್ನಡ ಸಪ್ಪೆ' ಎಂದು ಹೇಳಿದ್ದುಂಟು. ಒಬ್ಬರಾಡುವ ಮಾತು ಅಥವಾ ಬರೆದ ಬರೆಹ ಜೀವಂತ ಸುಂದರ ಎನಿಸಲು ಕಾರಣಗಳೇನು? ಅದು ಭಾಷೆಯ ಒಳಗೇ ಅಂತರ್ಗತವಾಗಿದೆಯೊ ಅದನ್ನು ಹುಟ್ಟಿಸುವ ವ್ಯಕ್ತಿತ್ವದಲ್ಲಿದೆಯೊ?

ಗದಗವು ಕವಿರಾಜಮಾರ್ಗಕಾರ ನಿರೂಪಿಸುವ ತಿರುಳ್ಗಗನ್ನಡ ಪ್ರದೇಶವಾದ ಒಕ್ಕುಂದ ಲಕ್ಷ್ಮೇಶ್ವರ ಕೊಪಣ ನಗರಗಳ ವಲಯದಲ್ಲಿ ಬರುತ್ತದೆ. ಗಡಿರಾಜ್ಯದ ಅಂಚನ್ನು ಹಂಚಿಕೊಳ್ಳದ ಜಿಲ್ಲೆಗಳಲ್ಲಿ ಒಂದಾಗಿರುವ ಗದಗದಲ್ಲಿ, ಕನ್ನಡೇತರ ಭಾಷೆಗಳ ಬೆರಕೆ ಕಡಿಮೆ. ಲಿಂಗಾಯತರ ಧಾರ್ಮಿಕ ಸಾಹಿತ್ಯವಾದ ವಚನಗಳು ಕನ್ನಡದಲ್ಲಿ ಇರುವುದರಿಂದ, ಸಿದ್ಧಲಿಂಗ ಸ್ವಾಮಿಯವರಿಗೆ ಕನ್ನಡ ಭಾಷೆಯ ಜತೆ ಭಾವನಾತ್ಮಕ ಹಾಗೂ ಚಾರಿತ್ರಿಕ ಸಂಬಂಧವಿತ್ತು. ಕನ್ನಡಕ್ಕೆ ಅಸಾಧಾರಣ ಅಭಿವ್ಯಕ್ತಿ ಶಕ್ತಿಯನ್ನೂ ಚೆಲುವನ್ನೂ ತುಂಬಿದ ವಚನಗಳನ್ನು ಅವರು, ಮಾತುಕತೆ-ಪ್ರವಚನ-ಭಾಷಣಗಳಲ್ಲಿ ಬಳಸುತ್ತಿದ್ದರು. ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಅವರು ಪುಸ್ತಕಪ್ರೇಮಿ. ತಾವು ಓದಿದ ಬರೆಹ ಹಿಡಿಸಿದರೆ, ಒಡನೆಯೆ ಮೆಚ್ಚನ್ನು ಬರೆದು ಲೇಖಕರಿಗೆ ತಿಳಿಸುತ್ತಿದ್ದರು. ಲೇಖಕರನ್ನು ಒಳಗೊಂಡಂತೆ ನಾಡಿನ ಬೇರೆಬೇರೆ ಕ್ಷೇತ್ರದ ಜನರ ಜತೆ ಅವರಿಗೆ ಸಂಪರ್ಕವಿತ್ತು. ಮುಖ್ಯವಾಗಿ ಗದಗ-ಹುಬ್ಬಳ್ಳಿ-ಬಿಜಾಪುರ ಸೀಮೆಯ ವ್ಯಾಪಾರಿಗಳು ರೈತರು ಹಾಗೂ ರಾಜಕಾರಣಿಗಳ ಜತೆ ಒಡನಾಟವಿತ್ತು; ಅವರು ಮಂದಿಯ ಲೌಕಿಕ ಆಧ್ಯಾತ್ಮಿಕ ಸಮಸ್ಯೆಗಳನ್ನು ಬಿಡಿಸುತ್ತ ಅವರ ಸುಖ ದುಃಖಗಳ ಭಾಗವಾಗಿದ್ದರು.

ಇವೆಲ್ಲವೂ ತೋಂಟ ದಾರ್ಯರ ಭಾಷೆಯ ಚೆಲುವಿನ ಹಿನ್ನೆಲೆಯಲ್ಲಿ ಇರಬಹುದಾದ ತಾಂತ್ರಿಕ ಮತ್ತು ಚಾರಿತ್ರಿಕ ಕಾರಣಗಳು. ಆದರೆ ಅವರ ಕನ್ನಡದ ಕಸುವಿಗೆ ನಿಜವಾದ ಕಾರಣ, ವೈಚಾರಿಕತೆ ಮತ್ತು ಜಾತ್ಯತೀತ ಪ್ರಜ್ಞೆ. ಅವರೊಮ್ಮೆ ತಮ್ಮ ಮಠದ ಜಾತ್ರಾ ಉತ್ಸವದ ಸಾರ್ವಜನಿಕ ಸಮಿತಿಯ ಅಧ್ಯಕ್ಷರನ್ನಾಗಿ ಸ್ಥಳೀಯ ಮುಸ್ಲಿಂ ನಾಯಕನನ್ನು ನೇಮಿಸಿದರು. ಕೆಲವರು ಗದ್ದಲ ಎಬ್ಬಿಸಿದರೂ ಮಣಿಯಲಿಲ್ಲ. ಪುತ್ತೂರ ಮಹಾಲಿಂಗೇಶ್ವರ ದೇವಳದ ಜಾತ್ರೆಯಲ್ಲಿ, ಶಿಷ್ಟಾಚಾರದ ಪ್ರಕಾರ ಅಲ್ಲಿಯ ಜಿಲ್ಲಾಧಿಕಾರಿಯ ಹೆಸರು ಆಹ್ವಾನಪತ್ರದಲ್ಲಿ ಮುದ್ರಣವಾಗಲು, ಸದರಿ ಅಧಿಕಾರಿ ಮುಸ್ಲಿಮರಾದ ಕಾರಣ ಅದನ್ನು ತೆಗೆವನಕ ಜಾತ್ರೆ ಮಾಡಲಾಗದು ಎಂದು ಕೆಲವರು ಹಟ ಮಾಡಿದರು. ಇಂತಹ ಪ್ರಕರಣಗಳ ಹಿನ್ನೆಲೆಯಲ್ಲಿ ಗದಗಿನ ಜಾತ್ರಾ ಪ್ರಕರಣವನ್ನು ಗಮನಿಸಬೇಕು. ಇದು ಕರಾವಳಿ ಮತ್ತು ಉತ್ತರ ಕರ್ನಾಟಕಗಳ ನಡುವಣ ವ್ಯತ್ಯಾಸ ಕೂಡ. ಒಮ್ಮೆ ತೋಂಟದಾರ್ಯರು ಕರಾವಳಿ ಮೂಲದ ಬದಾಮಿವಾಸಿ ಲೇಖಕಿ ಕಸ್ತೂರಿ ಬಾಯಿರಿಯವರ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಇರಿಸಿಕೊಂಡಿದ್ದರು. ಕಾರ್ಯಕ್ರಮದ ಬಳಿಕ ಕಸ್ತೂರಿ ನನ್ನಲ್ಲಿ ಹೇಳಿದರು: "ಸರ, ತವರಿನೊಳಗ ಸಿಗಲಾರದ ಪ್ರೀತಿ ಸಿಕ್ಕಿತು. ಅಜ್ಜಾ ಅವರು ಇಳಕಲ್ ಸೀರಿ ಆಹೇರಿ ಮಾಡಿದರು. ಹತ್ತುಸಾವಿರ ರೊಕ್ಕ ಉಡಿಗೆಹಾಕಿದರು. ನಾನೇನು ಲಿಂಗಾಯತರವಳಲ್ಲ. ಮಠದ ಭಕ್ತೆಯಲ್ಲ. ಇದಕ್ಕೆ ಏನನ್ನಬೇಕ್ರಿ?"

ಈ ಪರಿಯ ಜಾತ್ಯತೀತ ಸಂಸ್ಕೃತಿಯ ಒಂದು ಬೇರು, ತೋಂಟದಾರ್ಯರು ಹುಟ್ಟಿಬೆಳೆದ ಬಿಜಾಪುರದ ಸಂಸ್ಕೃತಿಯೊಳಗೇ ಇದ್ದಂತಿದೆ. ಬಿಜಾಪುರದ ಈ ಜಾತ್ಯತೀತ ಪರಂಪರೆಯನ್ನು ಉದ್ಘಾಟಿಸಿದವರು ಸೂಫಿಗಳು. ಬಿಜಾಪುರದ ಸೂಫಿ ನಂಗಾಶಹಾ ಬ್ರಾಹ್ಮಣ ಸಮುದಾಯದಿಂದ ಬಂದ ಕಾಖಂಡಕಿ ಮಹಿಪತಿರಾಯರಿಗೆ ಗುರುವಾದರೆ, ಅಮೀನುದ್ದೀನ್ ಚಿಸ್ತಿಯವರು ಲಿಂಗಾಯತ ಹಿನ್ನೆಲೆಯ ಶಿರಹಟ್ಟಿಯ ಫಕೀರೇಶರನ್ನು ಶಿಷ್ಯರಾಗಿ ಸ್ವೀಕರಿಸಿದರು; ಎರಡನೇ ಇಬ್ರಾಹಿಂ ಆದಿಲಶಾಹಿ ನರಸಿಂಹ ಸರಸ್ವತಿಯವರ ಶಿಷ್ಯನಾಗಿದ್ದನು. ಇದೇ ನೆಲದಿಂದ 'ಅಬತೇರೆಸಿವಾ ಮೇರಕೋಯಿ ಕೃಷ್ಣ ಕನ್ಹಯ್ಯಾ' ಹಾಡಿದ ಅಮೀರ್‌ಬಾಯಿ ಕರ್ನಾಟಕಿ ಬಂದರು; ಮರಾಠ ಮೂಲದ ಹಂದಿಗನೂರು ಸಿದ್ದರಾಮಪ್ಪ ಕನ್ನಡದ ನಟನಾಗಿ ಹೊಮ್ಮಿದರು; ಬಿಜಾಪುರದ ಅಸ್ಮಿತೆ ಎನ್ನಬಹುದಾದ ಕೃಷ್ಣಪಾರಿಜಾತ ಪರಂಪರೆಯು, ಅಪ್ಪಾಲಾಲ್ ನದಾಫ ಎಂಬ ಶ್ರೇಷ್ಠ ನಟನನ್ನು ಹುಟ್ಟಿಸಿತು; ಇಲ್ಲಿನ ಶೈವಶಾಕ್ತ ತಾತ್ವಿಕ ಮುಖಾಮುಖಿಯ ಹರದೇಶಿ-ನಾಗೇಶಿ ಹಾಡು ಪರಂಪರೆಯು ಇಂಗಳಗಿ ಹುಸೇನನನ್ನು ರೂಪಿಸಿತು; ಇಮಾಂಬಿ ಎಂಬ ಬೋರಿಗಿ ಗ್ರಾಮದ ಆಡುಕಾಯುವ ಮುಸ್ಲಿಂ ಮಹಿಳೆ ಅದ್ಭುತವಾಗಿ ತತ್ವಪದ ಹಾಡುವಳು. ಸ್ವತಃ ತೋಂಟದಾರ್ಯ ಮಠದ 17ನೇ ಗುರು, ಶ್ರೀ ಸಿದ್ದೇಶ್ವರ ಮಹಾಸ್ವಾಮಿ (1881–1924) ಸ್ಥಳೀಯ ಮುಸ್ಲಿಮರಿಗೆ ಮಸೀದಿ ಕಟ್ಟಿಸಲು ಮಠದ ಭೂಮಿಯನ್ನು ದಾನಗೊಟ್ಟ ಇತಿಹಾಸವಿದೆ. ಈ ಕುರಿತು 19ನೇ ಶತಮಾನದ ಸೂಫಿ ವಂಶಜರಾದ ಸೈಯದ್ ಗೌಸ್ ಮದನಿ ಎಂಬುವವರು ಕೃತಜ್ಞತೆಯಿಂದ ಬರೆದ ತೋಂಟದಾರ್ಯ ಸ್ತೋತ್ರ ಕೃತಿಯಿದೆ. ಅದನ್ನು ತೋಂಟದಾರ್ಯ ಮಠವೇ ಪ್ರಕಟಿಸಿದೆ. ಉರ್ದು ಸ್ತೋತ್ರ-ಕನ್ನಡ ಅನುವಾದಗಳೆರಡೂ ಒಟ್ಟಿಗೆ ಇರುವ ವಿಶಿಷ್ಟ ದ್ವಿಭಾಷಿಕ ಪಠ್ಯವಿದು.

ಇದೇ ಹೊತ್ತಿಲ್ಲಿ ಬಸವತತ್ವಕ್ಕೆ ಸಲ್ಲದ ಹೇಳಿಕೆ ಮಾಡುವ ಲಿಂಗಾಯತ ಸಮುದಾಯದಿಂದ ಬಂದ ಕೆಲವು ರಾಜಕಾರಣಿಗಳು ನೆನಪಾಗುತ್ತಾರೆ. ಅವರಲ್ಲಿ ಒಬ್ಬರು 'ವಿಚಾರವಾದಿಗಳನ್ನು ಗುಂಡಿಟ್ಟು ಕೊಲ್ಲಬೇಕು' ಎಂದು ಬಹಿರಂಗವಾಗಿ ಕರೆಗೊಟ್ಟರು. ಬಸವತತ್ವ ಪ್ರತಿಪಾದಕರಾದ ಗೌರಿ-ಕಲಬುರ್ಗಿಯವರ ದಾರುಣ ಕೊಲೆಯ ಬಳಿಕವೂ ಚಿಂತಕರನ್ನು ಕೊಲ್ಲಬೇಕು ಎಂದರೆ ಏನರ್ಥ?

ವಾಗ್ಮಿತೆ-ಮಾತುಗಾರಿಕೆ ಎಷ್ಟೇ ಪ್ರಭಾವಶಾಲಿ ಆಗಿರಲಿ, ಅವುಗಳ ಹಿಂದಿನ ತತ್ವಸಿದ್ಧಾಂತ ದೋಷಪೂರ್ಣ ಆಗಿದ್ದಾಗ, ನುಡಿ ವಿಕಾರಗೊಳ್ಳುತ್ತದೆ. ದನಿಯ ನುಣುಪು ಕರ್ಕಶವೆನಿಸುತ್ತದೆ. ವಾಕ್ಕಿಗೆ ಚೆಲುವು ಕಸುವು ಒದಗುವುದು ವಿಶಿಷ್ಟ ಶಬ್ದ ಸಂಪತ್ತಿನಿಂದಲ್ಲ. ಅಂತರಂಗದೊಳಗೆ ಹುದುಗಿರುವ ಸಾಮಾಜಿಕ ಸಂವೇದನೆಯಿಂದ; ಹದುಳದ ನಾಡನ್ನು ಕಟ್ಟುವ ಮುಂಗಾಣ್ಕೆಯಿಂದ. ಶ್ರೇಷ್ಠ ಭಾಷೆಯು ಅತ್ಯುತ್ತಮ ಮನಸ್ಸಿನಿಂದಲೂ ಲೋಕಪ್ರೀತಿಯಿಂದಲೂ ಹುಟ್ಟುತ್ತದೆ. ಹೀಗಾಗಿಯೇ ಘನತೆವೆತ್ತ ವ್ಯಕ್ತಿತ್ವಗಳನ್ನು ಕಳೆದುಕೊಳ್ಳುವಾಗ, ಭಾಷೆಗೆ ಸತ್ವವನ್ನೆರೆದ ಮತ್ತು ಕೂಡುಬಾಳಿನ ಹಾದಿಗಾಣಿಸುವ ಶಕ್ತಿಗಳನ್ನೂ ಕಳೆದುಕೊಳ್ಳುತ್ತಿರುತ್ತೇವೆ. ನಂಜುಂಡಸ್ವಾಮಿ, ಲಂಕೇಶ್, ಅನಂತಮೂರ್ತಿ, ತೇಜಸ್ವಿ, ಕಾರ್ನಾಡರ ಕಣ್ಮರೆಯಂತೆ ತೋಂಟದಾರ್ಯರ ಮರಣವೂ, ಕರ್ನಾಟಕ ತನ್ನ ಶಕ್ತಿಚೈತನ್ಯದ ಮೂಲವೊಂದನ್ನು ಕಳೆದುಕೊಂಡ ವಿಷಾದದ ಗಳಿಗೆಯಾಗಿದೆ.

## ಈಗ ಕಿಟಕಿ ಖಾಲಿ ಖಾಲಿ



■ **ಮಹಿಮ**

ಆಕೆ ಕಿಟಕಿಯ ಬಳಿ ನಿಂತು ಎದುರಿಗಿರುವ ಹಾದಿಯನ್ನೇ ಗಮನಿಸುತ್ತಿದ್ದಾಳೆ..
ಅವನು ಅದೇ ಹಾದಿಯಲ್ಲಿ ಬಂದು ಅದೇ ಹಾದಿಯಲ್ಲಿ ಹಿಂದಿರುಗಿ ಹೋದದ್ದು.. ಅವನು ಮತ್ತೆ ಯಾವಾಗ ಬರುತ್ತಾನೋ ಏನೋ? ಅವಳು ಚಿಂತಿತಳಾಗಿದ್ದಳು...
ದಿನವೂ ಅವಳದು ಅದೇ ಕೆಲಸ,ಅವನ ನೆನಪಾದಾಗಲೆಲ್ಲ ತನಗೆ ಸಾಕಾಗುವಷ್ಟು ಕಾಲ ಕಿಟಕಿ ಬಳಿ ನಿಂತು ಆ ಹಾದಿಯನ್ನೇ ಗಮನಿಸುತ್ತಿದ್ದಳು.. ಅವನು ಹೋಗಿ ಸುಮಾರು ವರ್ಷಗಳೇ ಆದವು,ಒಂದಲ್ಲ ಒಂದು ದಿನ ಅವನು ಬಂದೇ ಬರುತ್ತಾನೆಂಬ ಭರವಸೆ ಅವಳದು..
ಸಾಕಾಗುವಷ್ಟು ಸಮಯ ಕಿಟಕಿ ಬಳಿ ನಿಂತು ಅವನಿಗಾಗಿ ಕಾದು ನಿರಾಶಳಾಗಿ ನಿಟ್ಟುಸಿರಿಟ್ಟು ಮತ್ತೆ ನಿತ್ಯ ಕೆಲಸದಲ್ಲಿ ತೊಡುಗುವುದೇ ಅವಳ ನಿತ್ಯ ಕಾಯಕ ಆಗಿತ್ತು..
ಅವನು ಅವಳ ಭರವಸೆ ಆಗಿದ್ದ..ಬದುಕಾಗಿದ್ದ.. ಉಸಿರಾಗಿದ್ದ..ಆಕೆಯ ಮನೋಭಾರವನ್ನು ತಣಿಸುವ ಭಾವನೆಗಳ ಬಾಹು ಆಗಿದ್ದ..
"ಮತ್ತೊಂದು ಬರುವೆನೋ ನನಗೆ ಗೊತ್ತಿಲ್ಲ" ಅಂದಿದ್ದವ ಇಂದಿನವರೆಗೂ ಬರಲಿಲ್ಲ.. ಅವನ ನೆನಪಾದರೆ ಅವಳ ಹೃದಯಕ್ಕೆ ಸಾಯುವಂತಹ ಯಾತನೆ.. ಪರಸ್ಪರ ಸೋತು ಹೋದ ಮೇಲೆ ಅ ಸಂಬಂಧಗಳೇ ಹಾಗೆ.. ಪರಸ್ಪರ ಮಿಡಿಯುತ್ತವೆ... ಗೋಳಿಡುತ್ತವೆ.. ಒಮ್ಮೆ ಅವನು/ಅವಳು ಕಣ್ಣಿಗೆ ಬಿದ್ದರೆ ಸಾಕು, ಒಮ್ಮೆ ಅವಳ / ಅವನ ದನಿ ಕಿವಿಗೆ ಬಿದ್ದರೆ ಸಾಕು ಅನ್ನಿಸಿಬಿಡುತ್ತದೆ... ನಿರಂತರ ಅನುಗಾಲ ಜೊತೆಯಲ್ಲಿ ಬದುಕೋಣ ಅಂದುಕೊಂಡ ಜೀವಗಳು ಕೇವಲ ಕ್ಷಣ ಮಾತ್ರ ಕಣ್ಣಿಗೆ ಕಾಣಿಸಿಕೊಂಡರೆ ಸಾಕು,ದನಿ ಕಿವಿಗೆ ಬಿದ್ದರೆ ಸಾಕು ಅಂದುಕೊಂಡುಬಿಡುತ್ತವೆ..
ಆತ ಸ್ಪಷ್ಟವಾಗಿ ಬರುತ್ತೇನೆಂದು ಹೇಳಿ ಹೋಗಲಿಲ್ಲ.. ಅವನನ್ನು ಬಿಡಬಾರದಿತ್ತು.. ನಾನು ನಿನ್ನೊಡನೆ ಬಂದುಬಿಡುವೆ ಅನ್ನಬೇಕಿತ್ತು ಅಂದುಕೊಂಡು ತಲೆಯ ಕೂದಲನ್ನು ಕಿತ್ತಿಕೊಳ್ಳುತ್ತಾಳೆ...
ಕನಸಿನಲ್ಲಿ ಕಾಣಿಸಿಕೊಂಡವ ಎದುರಿಗೆ ಬಂದು ನಿಲ್ಲಲೇನು ಕಷ್ಟ ಅಂದುಕೊಳ್ಳುತ್ತಾಳೆ.. ಅವನು ಎಲ್ಲಿದ್ದಾನೋ ಏನೋ ಹುಡುಕು ಮನಸೇ ಎಂದು ನಿದ್ರೆಗೆ ಜಾರುತ್ತಾಳೆ.. ಮನಸಿಗೆ ಕನಸಿನಲ್ಲಿ ಹುಡುಕುವ ಕೆಲಸ ಕೊಡುತ್ತಾಳೆ.. ಅವನು ಅಲ್ಲೆಲ್ಲೋ ಅಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತಾನೆ..ತನ್ನೆಡೆಗೆ ಅವನು ತಿರುಗಿ ನೋಡುತ್ತಿಲ್ಲ..ತನಗೂ ಕೂಗಲಾಗುತ್ತಿಲ್ಲ.. ಎತ್ತಲೋ ನಡೆದು ಹೋಗುತ್ತಿದ್ದಾನೆ.. ಎತ್ತ ಸಾಗುತಿಹನೋ ಏನೋ? ಎಚ್ಚರವಾದಾಗ ಭೋರ್ಗರೆದು ಅಳುತ್ತಾಳೆ.. ತಾಯಿಯ ತೆಕ್ಕೆ ಬಡಿದುಕೊಂಡು ಸಾಕಾಗುವವರೆಗೆ ಅಳುತ್ತಾಳೆ.. ಅವನು ಇಂದು ಬರಲಿಲ್ಲ,ನಾಳೆ ಬಂದೇ ಬರುತ್ತಾನೆ..ಅಂದುಕೊಂಡು ಹತ್ತು ವರ್ಷಗಳಾದವು.. ದೇಹ ಬಾಡುತ್ತಿದೆ..ಅವನಾಗಮನವಿಲ್ಲ,ಅನ್ನ ಸೇರದೇ ಆಕೆ ಕೃಶಳಾಗಿ ಹೋಗಿದ್ದಾಳೆ..ಈಗ ಕಿಟಕಿಯ ಬಳಿ ಅಕೆಗೆ ನಿಲ್ಲಲಾಗುತ್ತಿಲ್ಲ..
ಕಿಟಕಿಯ ಬಳಿ ಕುಸಿದು ಕುಳಿತು ದಾರಿಯನ್ನೇ ಗಮನಿಸುತ್ತಿದ್ದಾಳೆ... ನೀನೊಮ್ಮೆ ಬಂದು ಬಿಡು ಮತ್ತೆ ನಾನು ಮೊದಲಿನಂತಾಗಿ ಬಿಡುವೆ,ನಿನಗಾಗಿ ಮತ್ತೆ ಅರಳಿಬಿಡುವೆ ಅಂತ ಅಂದುಕೊಳ್ಳುತ್ತಾಳೆ... ಆತ ಬರಲೇ ಇಲ್ಲ.. ಆಕೆ ಕಿಟಕಿಯ ಬಳಿ ಕುಸಿದುಬೀಳುತ್ತಾಳೆ..
ಕಿಟಕಿ ಆಕೆಗಾಗಿ ಮರುಗುತ್ತದೆ... ಆತ ಬರಲಿಲ್ಲ.. ದುರಂತ.. ಆಕೆಯ ದೇಹವನ್ನು ಹೊತ್ತವರು ಅದೇ ಹಾದಿಯಲ್ಲಿ ಸಾಗುತ್ತಿದ್ದಾರೆ... ಹಾದಿಯೂ ಆಕೆಗಾಗಿ ಮರುಗುತ್ತಿದೆ..ಜೋರು ಗಾಳಿ ಬೀಸಿ ಗುಲ್ ಮೊಹರ್ ಹೂಗಳು ಆಕೆಯ ಶರೀರದ ಮೇಲೆ ಬೀಳುತ್ತವೆ... ಈಗ ಕಿಟಕಿ ಖಾಲಿ ಖಾಲಿ.

**ಹಂಪಿ ಟೈಮ್ಸ್**
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 9448633038

## ಕವಿ ಮನಸು

### ಮುನಿಸೇಕೆ...



ಮುಡಿತುಂಬ ಮಲ್ಲಿಗೆಯ
ಮುಡಿದಿರುವೆ ನೀ ಚೆಲುವೆ
ಕುಡಿನೋಟ ನೀನೇಕೆ ಮರೆಸಿ ನಿಂತೆ
ಬಡಿಗೆಯಲಿ ಒಂದೆರಡು
ಬಡಿದು ಬಿಡು ಮನ ತಣಿಯೆ
ಕಡೆಗಣಿಸಿ ತೆರಳದಿರು ನನ್ನ ಕಾಂತೆ

ಬಂಗಾರದೊಡವೆಯಲಿ
ಶೃಂಗಾರಗೊಂಡಿರುವೆ
ಸಂಗಾತಿ ನೀನೀಗ ಬಳಿಗೆ ಬಾರೆ
ಸಿಂಗಾರಿ ನಿನ್ನಿಂದ
ದಂಗಾಗಿ ಹೋಗಿರುವೆ
ತಂಗಾಳಿಯಂದದಲಿ ಹಿತವ ತಾರೆ

ಕನಸೆಲ್ಲ ಕೈಗೂಡಿ
ನನಸಾಗಿ ಬಂದಿರಲು
ಮುನಿಸೇಕೆ ನನ್ನಲ್ಲಿ ಹೇಳು ಚೆಲುವೆ
ಮನದೊಳಗೆ ಕುಳಿತಿರುವೆ
ಕಣಕಣದಿ ಬೆರೆತಿರುವೆ
ಮನದನ್ನೆ ತೊರೆ ಮೌನ ಜೊತೆಗೆ ಬೆರೆವೆ॥

– **ಪೆರ್ಮುಖ ಸುಬ್ರಹ್ಮಣ್ಯ ಭಟ್**

### ಹುಟ್ಟು

ಭಿಕ್ಷುಕನಾದರೂ
ಕನ್ನಡ ನಾಡಲ್ಲಿ ಮೆರೆವೆ
ಹಾಡು ಕೇಳಿದ್ದೆ!

ಏಳೇಳು ಜನ್ಮಕೂ
ನೀವೆ ನನ್ನ ಪತಿ/ಸತಿ
ಹೇಳುವುದ ಕೇಳಿದ್ದೆ!

ಮತ್ತೇ ಮರುಜನ್ಮ ಇದ್ದರೆ
ನೀವೇ ನನ್ನ ತಂದೆ ತಾಯಿ
ಹೇಳುವುದ ಕೇಳಿದ್ದೆ!

ಮತ್ತೇ ಹುಟ್ಟಿದರೆ
ಇದೇ ಮಣ್ಣಲಿ ಹುಟ್ಟುವೆ
ಎನ್ನುವವರ ಕೇಳಿದ್ದೆ!

ಮುಂದಿನ ಜನ್ಮ ಇದ್ದರೆ
ಬೇರೆ ಧರ್ಮದಲ್ಲಿ ಹುಟ್ಟುವೆ
ಎನ್ನುವವರ ಎಲ್ಲಿಯೂ ಕೇಳಿರಲಿಲ್ಲ !!

– **ಚಂದ್ರಶೇಖರಯ್ಯ** ರೋಣದಮಠ




**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಾನಿರುವಾಗ ಇನ್ನೊಂದು ಮದುವೆ ಯಾಕೆ? ಹೆಣ್ಣು ಮಾತ್ರ ಬಂಜೆನಾ....?



**ಬಂಜೆತನ**

ಇಬ್ಬರು ನವವಿವಾಹಿತ ಯುವ ಜೋಡಿ ಯಾವಾಗಲೂ ನಗುತ್ತಾ ಖುಷಿಯಿಂದ ಪ್ರವಾಸ. ಯೋಗ. ಹೋಟೆಲ್. ಮದುವೆ. ಹೀಗೆ ಎಲ್ಲಾ ಕಡೆ ಓಡಾಡಿಕೊಂಡು ಎಲ್ಲರ ಒಟ್ಟಿಗೆ ಪ್ರೀತಿ ಪ್ರೇಮ ಸಹಕಾರದೊಂದಿಗೆ ಖುಷಿಯಾಗಿದ್ದರು, ಕೆಲವು ತಿಂಗಳ ನಂತರ ಅಚಾನಕ್ಕಾಗಿ ಹುಡುಗ ತನ್ನ ಪತ್ನಿಗೆ 'ನಾನು ನಿನ್ನನ್ನು ತುಂಬಾ ಪ್ರೀತಿಸ್ತೀನಿ ಹೇಗಾದರು ಮಾಡಿ ನನಗೆ ಒಂದು ಮಗು ಹೆತ್ತು ಕೊಡು.? , ಇಲ್ಲ ಅಂದರೆ ನಾನು ನನ್ನ ಒಲ್ಲದ ಮನಸಿನಿಂದ ಅಮ್ಮ ಅಪ್ಪನ ಮಾತು ಕೇಳಿ ಇನ್ನೊಂದು ಮದುವೆ ಮಾಡಿಕೊಳ್ಳಬೇಕಾಗುತ್ತದೆ' ಅಂತ್ ಹೇಳಿದಾಗ ಯುವತಿ ಗಾಬರಿಯಿಂದ ಕೇಳಿದಳು "ನಾನಿರುವಾಗ ನಿಮಗೆ ಇನ್ನೊಂದು ಮದುವೆ.ಯಾಕೆ? ಏನಾಯಿತು? ಅಂತ ಕೇಳಿದಳು.

ಆಗ ಆತ 'ನಮ್ಮಿಬ್ಬರ ಮದುವೆ ಆಗಿ 1 ವರ್ಷ ಕಳೆದರೂ ಇನ್ನೂ ಮಕ್ಕಳಾಗಿಲ್ಲ ನಿನಗೆ, ನಮ್ಮ ವಂಶೋಧಾರಕ್ಕೆ ಅಮ್ಮ ಅಪ್ಪ ಇನ್ನೊಂದು ಮದುವೆ ಬಗ್ಗೆ ಚರ್ಚೆ ಮಾಡಿದ್ದಾರೆ ಕಣೆ.'....ಎಂದಾಗ ಅವಳು ಆಕಾಶವೇ ಕಳಚಿಬಿದ್ದಂತಾಗಿ ಮೌನಿಯಾದಳು......ಹತ್ತು ಹಲವು ಯೋಚನೆಗಳು ಅವಳ ಮನಸ್ಸಿನಲ್ಲಿ ಮೂಡತೊಡಗಿದವು.ಸುಖ ದಾಂಪತ್ಯದ ಜೀವನದಲ್ಲಿ ಮಕ್ಕಳು ಬೇಕೇ.? ಮಕ್ಕಳಿಲ್ಲದೆ ಬದುಕು ಇಲ್ಲವೇ.? ಇದಕ್ಕೆ ಪರ್ಯಾಯ ವ್ಯವಸ್ಥೆ ಇಲ್ಲವೇ.? ಎಂದೆಲ್ಲ ಯೋಚಿಸತೊಡಗಿದಳು.

**ಮಕ್ಕಳಾಗಲು ಕೇವಲ ಹೆಣ್ಣೇ ಕಾರಣವೇ....?**

ಇಲ್ಲಿ ಹೆಣ್ಣು ಮತ್ತು ಗಂಡು ಇಬ್ಬರದೂ ಸಮ ಪಾಲು ಅಲ್ಲವೇ?....ಹೆಣ್ಣು ಮಾತ್ರ ಬಂಜೆನಾ.... ಇಲ್ಲಿ ಹೆಣ್ಣಿಗೆ ದೋಷಿ ಅಂತ ಅನ್ನುವುದು ಎಷ್ಟು ಸರಿ? ಹೀಗೆ ಕೆಲವು ದಿವಸಗಳ ನಂತರ ಹುಡುಗನ ಸಹೋದರಿಯ ಮಗುವಿನ ನಾಮಕರಣದ ಸಂಭ್ರಮದ ಕ್ಷಣ ಜರುಗಿತು. ಆ ಸಂದರ್ಭದಲ್ಲಿ ಎಲ್ಲಾ ಹೆಣ್ಣು ಮಕ್ಕಳು ಶೃಂಗಾರ ಮಾಡಿಕೊಂಡು ಬಂದು ಮಗುವಿನ ನಾಮಕರಣ ಮಾಡಲು ತೊಟ್ಟಿಲು ಪೂಜೆ ಪ್ರಾರಂಭಿಸಿದರು, ಅಲ್ಲಿರುವ ಹಿರಿಯ ಮಹಿಳೆಯೊಬ್ಬಳು ಯುವಕನ ಹೆಂಡತಿಗೆ ಅಮ್ಮ ನೀನು ಈ ಕಡೆಗೆ ಬಾ ನೀನು ಬಂಜೆ ಕಣಮ್ಮ ನೀನು ಶುಭ ಕಾರ್ಯಗಳಲ್ಲಿ ಇರಬಾರದು ,ಅಪಶಕುನ ಆಗುತ್ತದೆ ಎಂದಾಗ ಮೊದಲೇ ಈ ಕುರಿತು ಚಿಂತಿಸುತ್ತಿದ್ದ ಆ ಹೆಣ್ಣು ಮಗುವಿನ ಪರಿಸ್ಥಿತಿ ಏನಾಗಿರಬಹುದು ...ಯೋಚಿಸಿ.

**ಎಲ್ಲರ ಮನೆಯ ಹೆಣ್ಣು ಕೂಡಾ ಹೆಣ್ಣು ತಾನೇ?**

ಮದುವೆ ಆಗಿ ಇನ್ನೂ 1 ವರ್ಷ ಕೂಡ ಆಗಿಲ್ಲ,ಆಗಲೇ ಅವಳಿಗೆ ಬಂಜೆ ಪಟ್ಟ ಕಟ್ಟಿ ಚುಚ್ಚು ಮಾತನಾಡುವುದು ತಪ್ಪಲ್ಲವೇ...?.

ಮಕ್ಕಳಾಗಲು ಇಬ್ಬರೂ ಕಾರಣ ಇರಬಹುದು.ಕೇವಲ ಸ್ತ್ರೀ ಮಾತ್ರ ಅಲ್ಲವೇ ಅಲ್ಲ.ಇಲ್ಲಿ ಇಬ್ಬರ ಆರೋಗ್ಯ ಕೂಡ ಮುಖ್ಯ, ನೂರಕ್ಕೆ 90 ಪ್ರತಿಶತ ಪುರುಷರು ಹೆಣ್ಣಿನೊಂದಿಗೆ ಆಸ್ಪತ್ರೆಗೆ ಬರಲು ನಿರಾಕರಿಸುತ್ತಾರೆ,

ನಾನು ಪುರುಷ ನಾನೇಕೆ ಆಸ್ಪತ್ರೆಗೆ ಬರಬೇಕು? ಎಲ್ಲಿ ನಮ್ಮ ಪುರುಷತ್ವದ ಬಗ್ಗೆ ಪ್ರಶ್ನೆ ಬರುತ್ತೋ ಎನ್ನುವ ಭಯ ಅವರಲ್ಲಿ.

ಸೃಷ್ಟಿಯ ನಿಯಮವೇ ಹಾಗೆ ..ಹೆಣ್ಣಿಲ್ಲದೆ ಗಂಡಿಲ್ಲ, ಗಂಡಿಲ್ಲದೆ ಹೆಣ್ಣಿಲ್ಲ.... ಇದು ಸರ್ವೇ ಸಾಮಾನ್ಯ ಇಬ್ಬರಲ್ಲೂ ತೊಂದರೆಗಳು ಇರಬಹುದು....ಇದು ಶಾಪವೂ ಅಲ್ಲ, ಪುರುಷತ್ವ ಪರೀಕ್ಷೆ ಕೂಡ ಅಲ್ಲವೇ ಅಲ್ಲ. ಸಾಮಾನ್ಯವಾಗಿ ಮಕ್ಕಳಾಗದಿದ್ದರೆ ಮಹಿಳೆಯರನ್ನು ಗುರಿಯಾಗಿಸಿ ಅನೇಕ ಮನೆಗಳಲ್ಲಿ ಬೈಗುಳ, ಮಾನಸಿಕ ಒತ್ತಡ, ಹೀಯಾಳಿಸುವ ಕೆಲಸ ಮಾಡುತ್ತಾರೆ. ಇದು ತಪ್ಪು. ಯಾವುದೇ ಕಾರಣಕ್ಕೂ ಅವರನ್ನು ತುಚ್ಛವಾಗಿ ಕಾಣದೇ ಮಹಿಳೆಯರಿಗೆ ಮಾನಸಿಕ ಧೈರ್ಯ ತುಂಬಬೇಕು.

**ಸ್ತ್ರೀಯರಲ್ಲಿ ಬಂಜೆತನದ ಕಾರಣಗಳು:**

ಅಂಡೋತ್ಪತ್ತಿಯ ಅಸಹಜತೆಗಳು
ಡಿಂಬನಾಳದಲ್ಲಿ ಸಮಸ್ಯೆಗಳು
ಗರ್ಭಕೋಶದಲ್ಲಿ ಸಮಸ್ಯೆಗಳು
ಥೈರಾಯ್ಡ್ ಮತ್ತು ಪ್ರೊಲ್ಯಾಕ್ಟಿನ್ ರೀತಿಯ ಅಂತಃಸ್ರಾವಕದ ಸಮಸ್ಯೆಗಳು
ಎಂಡೋಮೆಟ್ರಿಯಾಸಿಸ್ ಮತ್ತು ಅಡನೊಮಯೋಸಿಸ್
ಬೊಜ್ಜುಮಹಿಳಾ ಬಂಜೆತನಕ್ಕೆ ಕಾರಣಗಳು

**ಅ). ಅಂಡೋತ್ಪತ್ತಿಯ ಅಸಹಜತೆಗಳು**

ಮಹಿಳೆಯರ ಸಂತಾನೋತ್ಪಾದನೆಯ ಹಾರ್ಮೋನುಗಳಲ್ಲಿ ಯಾವುದೇ ಅಸಮತೋಲನವು ಅಂಡೋತ್ಪತ್ತಿಯಲ್ಲಿ ಅಸಹಜತೆಗಳನ್ನು ಉಂಟು ಮಾಡಬಲ್ಲದು. ಕೆಲ ಅಂಡೋತ್ಪತ್ತಿಯ ಅಸಹಜತೆಗಳು ಹೀಗಿವೆ:

**ಪಿಸಿಓಎಸ್: ಪಿಸಿಓಎಸ್ / ಪಾಲಿಸಿಸ್ಟಿಮ್ ಓವರಿಯನ್ ಸಿಂಡ್ರೋಮ್**

ಹೆಚ್ಚಿನ ಪ್ರಮಾಣದ ಆಂಡ್ರೋಜೆನ್(ಪುರುಷ ಹಾರ್ಮೋನು) ಗಳಿಂದ ಉಂಟಾಗುವ ಮೂಲಕ ಅಂಡೋತ್ಪತ್ತಿಯಲ್ಲಿ ಅಡಚಣೆಗಳನ್ನು ಉಂಟು ಮಾಡುತ್ತದೆ. ಇದು ಮಹಿಳೆಯರಲ್ಲಿ ಬಂಜೆತನಕ್ಕೆ ಅತ್ಯಂತ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಮಹಿಳೆಯರಲ್ಲಿ ಬಂಜೆತನ ಉಂಟು ಮಾಡುವ ರೋಗಲಕ್ಷಣಗಳಲ್ಲಿ ಅನಿಯಮಿತ ಋತುಚಕ್ರಗಳು, ಮೊಡವೆ, ಅತಿಯಾದ ಕೂದಲು ಬೆಳೆಯುವುದು, ತೂಕ ಹೆಚ್ಚಾಗುವುದು ಇತ್ಯಾದಿ ಒಳಗೊಂಡಿವೆ. ಪ್ರಾಥಮಿಕ ಅಂಡಾಶಯದ ನ್ಯೂನತೆ/ಅವಧಿಪೂರ್ವ ಅಂಡಾಶಯದ ವೈಫಲ್ಯ: ಕೆಲವು ಮಹಿಳೆಯರಲ್ಲಿ ಅಂಡಾಶಯಗಳು ಹಲವು ಕಾರಣಗಳಿಗೆ 40 ವರ್ಷಗಳಿಗಿಂತ ಮುನ್ನವೇ ಕಾರ್ಯ ನಿರ್ವಹಣೆ ಸ್ಥಗಿತಗೊಳಿಸುತ್ತವೆ.

**ವಂಶವಾಹಿ ಕಾರಣಗಳು**

ಟರ್ನರ್ ಸಿಂಡ್ರೋಮ್, ಫ್ರಜೈಲ್ ಎಕ್ಸ್ ಸಿಂಡ್ರೋಮ್ ಇತ್ಯಾದಿ ಅವಧಿಪೂರ್ವ ಅಂಡಾಶಯ ವೈಫಲ್ಯಕ್ಕೆ ಕಾರಣವಾಗುತ್ತವೆ.

**ಡಿಂಬನಾಳದಲ್ಲಿ ಸಮಸ್ಯೆಗಳು**

ಡಿಂಬನಾಳವು ಮಹಿಳಾ ಸಂತಾನೋತ್ಪಾದನೆಯ ವ್ಯವಸ್ಥೆಯ ಭಾಗವಾಗಿದ್ದು ಅದರಲ್ಲಿ ಅಂಡಾಣು ಮತ್ತು ವೀರ್ಯದ ಫಲವಂತಿಕೆ ಉಂಟಾಗುತ್ತದೆ. ಆದರೆ ಡಿಂಬನಾಳದಲ್ಲಿ ಹಲವಾರು ಸಮಸ್ಯೆಗಳಿದ್ದು ಅವು ಫಲವಂತಿಕೆಗೆ ಹಾನಿಯುಂಟು ಮಾಡಬಹುದು. ಅವುಗಳಲ್ಲಿ ಕೆಲವು ಕಾರಣಗಳು:

ಡಿಂಬನಾಳ ಇಲ್ಲದಿರುವಿಕೆ (ಟ್ಯೂಬಲ್ ಅಪ್ಲೇಸಿಯಾ)
ಕ್ಷಯದಂತಹ ಸೋಂಕುಗಳು
ಲೈಂಗಿಕವಾಗಿ ವರ್ಗಾವಣೆಯಾದ ರೋಗಗಳಿಂದ ಉಂಟಾದ ಶ್ರೋಣೀಯ ಉರಿಯೂತದ ರೋಗ
ಶ್ರೋಣಿ/ಹೊಟ್ಟೆಯಲ್ಲಿ ಹಿಂದಿನ ಶಸ್ತ್ರಚಿಕಿತ್ಸೆ
ಅಪೆಂಡಿಸೈಟಿಸ್
ಹೈಡ್ರೊಸಾಲ್ ಪಿಂಕ್ಸ್(ಡಿಂಬನಾಳದಲ್ಲಿ ದ್ರವ ಶೇಖರಣೆ)

**ಗರ್ಭಕೋಶದಲ್ಲಿನ ಸಮಸ್ಯೆಗಳು**

ಫೈಬ್ರಾಯಿಡ್ ಗಳು
ಅಸಹಜ ಆಕಾರದ ಗರ್ಭಕೋಶ
ತೆಳು ಎಂಡೋಮೆಟ್ರಿಯಂ, ಪಾಲಿಪ್ಸ್ ನಂತಹ ಎಂಡೋಮೆಟ್ರಿಯಲ್ ಪೆಥಾಲಜಿ.

**ಪುರುಷ ಬಂಜೆತನಕ್ಕೆ ಕಾರಣಗಳು**

* ಅಗತ್ಯಕ್ಕಿಂತ ಕಡಿಮೆ ವೀರ್ಯಾಣುಗಳು
* ಅತಿಯಾದ ತೂಕ
* ವ್ಯಾರಿಕೊಸಿ
* ಮಧುಮೇಹ, ಥೈರಾಯ್ಡ್
* ಬದಲಾದ ಜೀವನ ಶೈಲಿ
* ಕೆಲಸದ ಒತ್ತಡ
* ಸತತ ಕಂಪ್ಯೂಟರ್ ಬಳಕೆ ಇಲ್ಲಿ ಇಬ್ಬರ ತಪಾಸಣೆ ಕೂಡ ಅಗತ್ಯ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

**ಬಂಜೆತನ ನಿವಾರಣೆಗೆ ಚಿಕಿತ್ಸೆಗಳು**

ಸ್ತ್ರೀಯರ ಬಂಜೆತನ ರೋಗ ಪರೀಕ್ಷೆ:
ದೈಹಿಕ ಪರೀಕ್ಷೆ
ಅಲ್ಟ್ರಾಸೌಂಡ್
ಅಂಡಾಶಯದ ರಿಸರ್ವ್ ಟೆಸ್ಟ್
ಒಳಗೊಂಡು ಹಾರ್ಮೋನ್ ಪರೀಕ್ಷೆಗಳು
ಹಿಸ್ಟೆರೊಸಲ್ಪಿಂಗೊಗ್ರಫಿ
ಹಿಸ್ಟೆರೆಸ್ಕೊಪಿ
ಲ್ಯಾಪರೊಸ್ಕೊಪಿ
ಅನುವಂಶಿಕ ಪರೀಕ್ಷೆ

**ಮಹಿಳಾ ಬಂಜೆತನದ ಚಿಕಿತ್ಸೆ:**

ಅಂಡಾಣು ಬಿಡುಗಡೆಯಾಗದ ಪ್ರಕರಣಗಳಲ್ಲಿ ಅಂಡಾಣುಗಳ ಸೇರಿಸುವಿಕೆ ಗರ್ಭಕೋಶದ ಅಸಹಜತೆಯನ್ನು ಸರಿಪಡಿಸುವುದು, ಗರ್ಭಕೋಶದ ಟ್ಯೂಬ್ ನಲ್ಲಿನ ತಡೆ, ಫೈಬ್ರಾಯಿಡ್ ಗಳು ಅಥವಾ ಎಂಡೋಮೆಟ್ರಿಯಲ್ ಪಾಲಿಪ್ ಸರಿಪಡಿಸುವುದು. ಲ್ಯಾಪರೊಸ್ಕೊಪಿಕ್/ಹಿಸ್ಟೆರೊಸ್ಕೊಪಿಕ್ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗುತ್ತದೆ

ಮಹಿಳೆಯರಿಗೆ ಅಗತ್ಯವಿದ್ದಾಗ ಐಯುಐ, ಐವಿಎಫ್ ನಂತಹ ಚಿಕಿತ್ಸೆಗಳು ಮಹಿಳೆಯರಿಗೆ ಗರ್ಭಧಾರಣೆಗೆ ನೆರವಾಗುತ್ತವೆ.

**ಪುರುಷ ಬಂಜೆತನದ ಚಿಕಿತ್ಸೆ**

ಹೈಪೊಗೊನಾಡೊಟ್ರೊಪಿಕ್ ಹೈಪೊಗೊನಾಡಿಸಂ, ಕಡಿಮೆ ವೀರ್ಯದ ಪ್ರಮಾಣ ಮತ್ತು ಚಲನಶೀಲತೆಯ ಕೊರತೆ ಇತ್ಯಾದಿ ಪ್ರಕರಣಗಳಲ್ಲಿ ಹಾರ್ಮೋನುಗಳು, ಉತ್ಕರ್ಷಣ ನಿರೋಧಕಗಳ ಮೂಲಕ ವೈದ್ಯಕೀಯ ನಿರ್ವಹಣೆ. ಐಯುಐ, ಐವಿಎಫ್/ಐಸಿಎಸ್ಐ ನಂತಹ ಚಿಕಿತ್ಸೆಗಳನ್ನು ಬಳಸುವ ಮೂಲಕ ಪುರುಷರಿಗೆ ಬಂಜೆತನ ನಿವಾರಿಸಿಕೊಂಡು ತಂದೆತನ ಹೊಂದಲು ನೆರವಾಗಬಹುದು. ವೀರ್ಯ ಪಡೆಯುವ ತಂತ್ರಗಳಾದ ಟಿ.ಇ.ಎಸ್.ಎ, ಮೈಕ್ರೊ–ಟಿ.ಇ.ಎಸ್.ಇ ಮತ್ತು ವೀರ್ಯ ಪ್ರತ್ಯೇಕಗೊಳಿಸುವ ಚಿಕಿತ್ಸೆಗಳಾದ ಎಂ.ಎ.ಸಿ.ಎಸ್, ಮೈಕ್ರೊಫ್ಲೂಯಿಡಿಕ್ಸ್ ಲಭ್ಯವಿದ್ದು ಅವು ಫಲವಂತಿಕೆ ಸುಧಾರಿಸಬಲ್ಲವು. ಬಂಜೆತನದ ಪರಿಸ್ಥಿತಿಗಳು ಬಂಜೆತನಕ್ಕೆ ಕಾರಣವಾಗುವ ಅಂಶಗಳಾಗಿವೆ. ಬಂಜೆತನವು ಒಂದು ಕಾಯಿಲೆಯಾಗಿದ್ದು, ಇದರಲ್ಲಿ ದಂಪತಿಗಳು ಒಂದು ವರ್ಷದವರೆಗೆ ಗರ್ಭಿಣಿಯಾಗಲು ಪ್ರಯತ್ನಿಸುತ್ತಾರೆ ಆದರೆ ಗರ್ಭಿಣಿಯಾಗಲು ಅಥವಾ ಮಗುವನ್ನು ಹೊಂದಲು ಸಾಧ್ಯವಾಗುವುದಿಲ್ಲ. ಈ ವೈಫಲ್ಯದ ಕಾರಣ ಪುರುಷ ಸಮಸ್ಯೆಗಳಿಂದ ಮೂರನೇ ಒಂದು ಭಾಗ, ಸ್ತ್ರೀ ಸಮಸ್ಯೆಗಳಿಂದ ಮೂರನೇ ಒಂದು ಭಾಗ, ಮತ್ತು ಪುರುಷ ಮತ್ತು ಸ್ತ್ರೀ ಎರಡೂ ಸಮಸ್ಯೆಗಳು ಅಥವಾ ಅಜ್ಞಾತ ಕಾರಣಗಳಿಂದ ಮೂರನೇ ಒಂದು ಭಾಗವು ಕಂಡುಬರುತ್ತದೆ. ನಿಯಮಿತ ಮಧ್ಯಂತರದಲ್ಲಿ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಳ್ಳುವುದು ಎರಡೂ ಸಂಗಾತಿಗಳ ಹಿತದೃಷ್ಟಿಯಿಂದ ಉತ್ತಮವಾಗಿದೆ, ಆದರೆ ಅವರು ಮೇಲೆ ತಿಳಿಸಲಾದ ಯಾವುದೇ ರೋಗಲಕ್ಷಣಗಳನ್ನು ಅನುಭವಿಸಿದರೆ, ಅವರು ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು.

ಜೀವನಶೈಲಿ ಬದಲಾದಂತೆಲ್ಲ ಮಹಿಳೆಯರಲ್ಲಿ ಬಂಜೆತನದ ಪ್ರಕರಣಗಳು ಸಹ ಹೆಚ್ಚಾಗಿ ಗೋಚರಿಸುತ್ತಿವೆ. ಇದಕ್ಕೆ ನಿಮ್ಮ ತಪ್ಪಾದ ಜೀವನಶೈಲಿ ಹಾಗೂ ಆಹಾರ ಪದ್ಧತಿಯೇ ಮುಖ್ಯ ಕಾರಣವಾಗಿದೆ. ನಿಮ್ಮ ದಿನನಿತ್ಯದ ಜೀವನದಲ್ಲಿ ಈ ಬದಲಾವಣೆಗಳನ್ನು ಮಾಡಿಕೊಂಡಲ್ಲಿ ಬಂಜೆತನದ ಅಪಾಯದಿಂದ ಪಾರಾಗಬಹುದಾಗಿದೆ.

ಮದ್ಯಪಾನ ಮಾಡದಿರುವುದು, ಧೂಮಪಾನ ಬಿಡುವುದು, ಆರೋಗ್ಯಕರ ಆಹಾರ, ತೂಕ ನಿರ್ವಹಣೆ ಮತ್ತು ಒತ್ತಡ ನಿರ್ವಹಣೆಯನ್ನು ಕೂಡ ಹೋಗಲಾಡಿಸಲು ಯೋಜನೆ ರೂಪಿಸಬೇಕು. ಬಂಜೆತನದ ನಿರ್ವಹಣೆ ಈಗ ಒಂದು ಕದನವಾಗಿಲ್ಲ. ಸಮಯೋಚಿತ ಕ್ರಮದಿಂದ ಅದನ್ನು ಪರಿಣಾಮಕಾರಿಯಾಗಿ ಪರಿಹರಿಸಬಹುದು. ಇಬ್ಬರಲ್ಲಿ ಅನ್ಯೋನ್ಯತೆಯು ಈ ಸಮಸ್ಯೆ ಪರಿಹರಿಸಬಲ್ಲದು

ಯೋಗ, ವ್ಯಾಯಾಮ, ಧ್ಯಾನ, ಪೋಷಕಾಂಗಳ ಸೇವನೆ, ಮಾನಸಿಕ ನೆಮ್ಮದಿ, ಒತ್ತಡವಿಲ್ಲದ ಕೆಲಸ ಕಾರ್ಯಗಳು ಹೀಗೆ.... ಎಲ್ಲವೂ ಮಾಡಿದರು ಕೂಡ ಮಕ್ಕಳು ಆಗದಿದ್ದರೆ, ಮನಸಿಗೆ ನೋವು ಮಾಡಿಕೊಳ್ಳದೆ ಕಾನೂನಾತ್ಮಕವಾಗಿ ಅನಾಥ ಮಕ್ಕಳಿಗೆ ದತ್ತು ಪಡೆದು ಆ ಮಕ್ಕಳ ಪಾಲಕ ಪೋಷಕರಾಗಿ ಅವರಿಗೆ ಪ್ರೀತಿ, ಪ್ರೇಮ, ವಾತ್ಸಲ್ಯ, ಕಾಳಜಿ, ವಹಿಸಿ ಇದು ಮಗುವಿನ ಭವಿಷ್ಯ ರೂಪಿಸಿದ್ದಾಗ ಇದಕ್ಕಿಂತ ಸಾರ್ಥಕ ಜೀವನ ಬೇಕೇ?

# ಮಾ.14,15 ಕ್ಕೆ ವಿ.ಎಸ್.ಕೆ.ವಿ.ವಿ 2 ದಿನ ರಾಷ್ಟ್ರೀಯ ಸಮ್ಮೇಳನ

■ ಹಂಪಿ ಟೈಮ್ಸ್ ಬಳ್ಳಾರಿ

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಮಾ. 14 ಮತ್ತು 15 ರಂದು ವಾಣಿಜ್ಯಶಾಸ್ತ್ರ ವಿಭಾಗದ ವತಿಯಿಂದ "ವ್ಯಾಪಾರದಲ್ಲಿ ಸ್ಥಿತಿ ಸ್ಥಾಪಕತ್ವದ ನವ ಪ್ರವೃತ್ತಿ" ಎಂಬ ವಿಷಯ ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಕಾರ್ಯಕ್ರಮವನ್ನು ವಿವಿಯ ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಭಾರತ ಚಾರ್ಟರ್ಡ್ ಅಕೌಂಟೆಂಟ್ಸ್, ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ ನಿಕಟಪೂರ್ವ ಅಧ್ಯಕ್ಷ ಸಿ.ಎ.ಪನ್ನಾರಾಜ್.ಎಸ್ ಅವರು ಸಮ್ಮೇಳನವನ್ನು ಉದ್ಘಾಟಿಸುವರು.

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ಅಂತಾರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು ಪಾಲುದಾರಿಕೆಗಳು ನಿಕಾಯದ ಡೀನರಾದ ಡಾ.ಎಸ್. ರಮೇಶ್ ಸಮ್ಮೇಳನದ ಮುಖ್ಯ ಭಾಷಣ ಮಾಡುವರು.

ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಕೆ.ಎಂ. ಮೇತ್ರಿ ಅವರು ಅಧ್ಯಕ್ಷತೆ ವಹಿಸುವರು.

ಕುಲಸಚಿವರಾದ ರುದ್ರೇಶ್.ಎಸ್.ಎನ್., ಕುಲಸಚಿವರ (ಮೌಲ್ಯಮಾಪನ) ಪ್ರೊ.ರಮೇಶ್ ಓಲೇಕಾರ್, ವಿತ್ತಾಧಿಕಾರಿ ಪ್ರೊ. ಸದ್ಯೋಜಾತಪ್ಪ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಂಘಟನಾ ಕಾರ್ಯದರ್ಶಿ ಸಿಎಮ್ಎ ಡಾ. ಜೀಲಾನ್ ಭಾಷಾ.ವಿ ಮತ್ತು ವಿಭಾಗದ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿರುವರು.

ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ರಾಜ್ಯದ 200ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ತಮ್ಮ ಸಂಶೋಧನಾ ಪಾಂಡಿತ್ಯದ ಕುರಿತು ಪ್ರಬಂಧ ಮಂಡಿಸಲಿದ್ದಾರೆ ಎಂದು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**14-03-2024 – ಗುರುವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಭರಣಿ |
| ಯೋಗ | : ವೈಧೃತಿ |
| ಕರಣ | : ಭವ |
| ಸೂರ್ಯೋದಯ | : 06:37:40 |
| ಸೂರ್ಯಾಸ್ತ | : 18:34:34 |
| ರಾಹು | : 14:06-15:35 |
| ಯಮಘಂಡ | : 06:38-08:07 |
| ಗುಳಿಕ | : 09:37-11:07 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 13-03-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1583.96 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2025 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.663 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1598.91 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 7935 ಕ್ಯುಸೆಕ್ |
| ಸಾಮರ್ಥ್ಯ | 20.149 ಟಿಎಂಸಿ |

# ಮತವು ದೇಶದ ಭವಿಷ್ಯ ಬದಲಾಯಿಸುತ್ತದೆ

## ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ । ನನ್ನ ಒಂದು ಮತದಿಂದ ಏನು ಆಗುತ್ತದೆ ಎಂಬ ನಿರ್ಲಕ್ಷ್ಯ ಬೇಡ

■ ಹಂಪಿ ಟೈಮ್ಸ್ ಬಳ್ಳಾರಿ



ನನ್ನ ಒಂದು ಮತದಿಂದ ಏನು ಆಗುತ್ತದೆ ಎಂಬ ನಿರ್ಲಕ್ಷ್ಯ ಬೇಡ, ಪ್ರತಿಯೊಂದು ಮತವು ದೇಶದ ಭವಿಷ್ಯವನ್ನೇ ಬದಲಾಯಿಸುತ್ತದೆ' ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿಯೂ ಆದ ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ಮತ್ತು ಬಳ್ಳಾರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಜ್‌ಮೆಂಟ್ ಕಾಲೇಜ್ ಸಂಯುಕ್ತಾಶ್ರಯದಲ್ಲಿ ಬುಧವಾರದಂದು ಬಿಐಟಿಎಂ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ "ನೆರೆಹೊರೆ ಯುವ ಸಂಸತ್ತು-2024" ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಮತದಾನ ಮಾಡುವವರ ಸಂಖ್ಯೆ ಕಡಿಮೆ ಇದ್ದು, ಮೂಲಭೂತ ಸೌಲಭ್ಯಗಳಾದ ನೀರು, ಚರಂಡಿ, ರಸ್ತೆ, ವಿದ್ಯುತ್, ಇತರ ಸಮಸ್ಯೆಗಳ ಬಗ್ಗೆ ಗಮನಹರಿಸಿ, ಸೂಕ್ತವಾಗಿ ಪರಿಹರಿಸಲು ಇಂದಿನ ಯುವಜನತೆ ತಪ್ಪದೇ ಮತದಾನ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಮತ ಚಲಾವಣೆ ನಮ್ಮ ಹಕ್ಕು ಮತ್ತು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ತಮ್ಮ ಅತ್ಯಮೂಲ್ಯವಾದ ಮತವನ್ನು ಚಲಾಯಿಸಬೇಕು ಎಂದು ಕಿವಿಮಾತು ಹೇಳಿದರು.

ಬಳ್ಳಾರಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಜ್‌ಮೆಂಟ್ ಕಾಲೇಜಿನ ನಿರ್ದೇಶಕ ವೈ. ಜೆ.ಪೃಥ್ವಿರಾಜ್ ಭೂಪಾಲ್ ಅವರು ಸಂವಿಧಾನದಂತೆ ಮತದಾನವು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಒಂದೇ ಅಲ್ಲ.. ಇಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಂದ, ವಿದ್ಯಾರ್ಥಿಗಳಿಗಾಗಿ, ವಿದ್ಯಾರ್ಥಿಗಳಿಗೋಸ್ಕರ ಇರುವುದಾಗಿದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತಪ್ಪದೇ ಮತವನ್ನು ಚಲಾಯಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ಕೊಟ್ಟರು.

ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮೊಂಟು ಪತಾರ್ ಅವರು ವಿದ್ಯಾರ್ಥಿಗಳಿಗೆ ಚುನಾವಣಾ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಸೋಮಶೇಖರ್ ಅವರು ವಿದ್ಯಾರ್ಥಿಗಳಿಗೆ ಉದ್ಯಮಶೀಲತೆ ಬಗ್ಗೆ ಮಾಹಿತಿಯನ್ನು ನೀಡಿದರು.

ಬಿಐಟಿಎಂ ಕಾಲೇಜಿನ ಇಂಜಿನಿಯರಿಂಗ್ ಮತ್ತು ಎಂಬಿಎ ವಿದ್ಯಾರ್ಥಿಗಳಾದ ಡಾ.ಕೆ.ರೂಪ, ನಾಗರಾಜ್, ಸುಶ್ಮ ಪ್ರೇಮಕಲಾಲ್, ಸಂಪತ್ ಕುಮಾರ್ ಇವರ ನಿರ್ದೇಶನದಲ್ಲಿ "ಅಣಕು ಸಂಸತ್ತು ಅಧಿವೇಶನವನ್ನು" ಪ್ರಸ್ತುತ ಪಡಿಸಿದರು. ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್, ಎನ್‌ಸಿಸಿ ವಿದ್ಯಾರ್ಥಿಗಳೊಂದಿಗೆ ಸುಮಾರು 450 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಕಾಲೇಜಿನ ಪ್ರಾಚಾರ್ಯರಾದ ಡಾ.ಯಡವಳ್ಳಿ ಬಸವರಾಜ್, ಎನ್.ಎಸ್.ಎಸ್ ಪ್ರೊಗ್ರಾಮ್ ಆಫೀಸರ್ ಅಶೋಕ್.ಬಿ, ಡಾ.ಶೇಕ್‌ಮೀರಾ, ಕಮಲ್ ಕಿಶೋರ್, ಲಕ್ಷ್ಮೀರೆಡ್ಡಿ, ಅಮರೇಶ, ಬೆಂಜಮಿನ್, ಬಿಸಲಹಳ್ಳಿ ಬಸವರಾಜ್, ಡಾ.ವೀಣಾ ಸೇರಿದಂತೆ ವಿದ್ಯಾರ್ಥಿಗಳು, ಬೋಧಕ-ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕವಿಯತ್ರಿ ಲೇಖಕಿ ನೂರ್‌ಜಹಾನ್‌ಗೆ ಸನ್ಮಾನ

**ಹೊಸಪೇಟೆಯಲ್ಲಿ ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಮಂಗಳವಾರ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವರ್ಷದ ಸಾಧಕಿಯಾಗಿ ಲೇಖಕಿ, ಕವಿಯತ್ರಿ ನೂರ್‌ಜಹಾನ್ ಅವರನ್ನು ಜಿಲ್ಲಾಧಿಕಾರಿ ಸನ್ಮಾನಿಸಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಎಡಿಸಿ ಅನುರಾಧ ಇತರರು ಇದ್ದರು.**




# ಪೊಲೀಸ್ ಇಲಾಖೆಯಿಂದ ಮಹಿಳಾ ಅಧಿಕಾರಿ, ಸಿಬ್ಬಂದಿಗೆ ಸನ್ಮಾನ



■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬುಧವಾರದಂದು ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಜಿಲ್ಲೆಯ ಎಲ್ಲಾ ಮಹಿಳಾ ಅಧಿಕಾರಿ, ಸಿಬ್ಬಂದಿಯವರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜೀತ್ ಕುಮಾರ್ ಬಂಡಾರು ಅವರು, ಮಹಿಳಾ ಅಧಿಕಾರಿ, ಸಿಬ್ಬಂದಿಯವರಿಗೆ ಶುಭಾಷಯ ಕೋರಿದರು.

ಇದೇ ಸಂದರ್ಭದಲ್ಲಿ ಪೊಲೀಸ್ ಠಾಣೆ, ಕಚೇರಿ ಹಾಗೂ ಘಟಕಗಳಲ್ಲಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಯವರಿಗೆ ನಗದು ಬಹುಮಾನ ಹಾಗೂ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಗರಿ ಕೃಷಿ ಸಂಶೋಧನಾ ಕೇಂದ್ರದ ಆಹಾರ ವಿಜ್ಞಾನದ ವಿಜ್ಞಾನಿಗಳಾದ ಶಿಲ್ಪ ಅವರು ಮಾತನಾಡಿ, ಮಹಿಳೆಯರು ತಮ್ಮ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಲು ಉತ್ತಮ ಸಲಹೆ ಸೂಚನೆ ನೀಡಿದರು. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರ ವೃತ್ತಿ ಜೀವನ ಸುಧಾರಿಸುವ ನಿಟ್ಟನಲ್ಲಿ ಇಬ್ಬರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಟರಾಜ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

## ಮೈಕ್ರೋ ನ್ಯೂಸ್

### ಮಕ್ಕಳ ರಕ್ಷಣಾ ಘಟಕದಿಂದ ಬಾಲ್ಯವಿವಾಹ ತಡೆದು, ಬಾಲಕಿಯ ರಕ್ಷಣೆ

**ಹಂಪಿ ಟೈಮ್ಸ್ ಕೊಪ್ಪಳ**

ಯಲಬುರ್ಗಾ ತಾಲ್ಲೂಕಿನ ತಲ್ಲೂರು ಗ್ರಾಮದಲ್ಲಿ ಮಾರ್ಚ್ 11 ರಂದು ಆಯೋಜಿಸಿದ್ದ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ನಡೆಯಬೇಕಿದ್ದ ಬಾಲ್ಯ ವಿವಾಹವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಇತರೆ ಇಲಾಖೆಗಳ ಸಹಕಾರದಲ್ಲಿ ತಡೆದಿದ್ದು, ಬಾಲಕಿಯನ್ನು ಮುಂದಿನ ಪೋಷಣೆ ಹಾಗೂ ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರು ಪಡಿಸಲಾಗಿದೆ.

ಮಾರ್ಚ್ 11 ರಂದು ತಲ್ಲೂರು ಗ್ರಾಮದಲ್ಲಿ ಶ್ರೀ ಶರಣಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯೊಬ್ಬಳಿಗೆ ಬಾಲ್ಯ ವಿವಾಹವನ್ನು ಮಾಡಲಾಗುತ್ತಿದೆ ಎಂದು ಮಕ್ಕಳ ಸಹಾಯವಾಣಿ-1098/112ಗೆ ಮಾಹಿತಿ ಬಂದ ಹಿನ್ನಲೆಯಲ್ಲಿ, ಆ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಗನವಾಡಿ ಮೇಲ್ವಿಚಾರಕಿಯರು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು, ಶಾಲಾ ಮುಖ್ಯೋಪಾಧ್ಯಾಯರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಮಕ್ಕಳ ಸಹಾಯವಾಣಿ-1098/112 ಸಿಬ್ಬಂದಿಗಳು ತುರ್ತಾಗಿ ಸ್ಥಳಕ್ಕೆ ಧಾವಿಸಿ, ಬಾಲಕಿಯ ಮನೆಗೆ ಭೇಟಿ ಮಾಡಿ ವಿಚಾರಿಸಿದ್ದು, ವಿವಾಹವನ್ನು ಮಾಡುತ್ತಿರುವುದು ತಿಳಿದು ಬಂದಿತು. ಬಾಲ್ಯವಿವಾಹ ನಿಷೇಧ ಕಾಯ್ದೆ-2006ರ ಕುರಿತು ಹಾಗೂ ಬಾಲ್ಯವಿವಾಹದ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆಯನ್ನು ನೀಡಿ, ಬಾಲಕಿಗೆ 18 ವರ್ಷ (05.01.2008) ಪೂರ್ಣಗೊಳ್ಳದ ಕಾರಣ ಬಾಲಕಿಯನ್ನು ರಕ್ಷಿಸಿ, ಪೋಷಣೆ ಮತ್ತು ರಕ್ಷಣೆಗಾಗಿ, ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲು ತೀರ್ಮಾನಿಸಲಾಯಿತು. ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ತುರ್ತಾಗಿ ಹಾಜರುಪಡಿಸಲು ವಾಹನ ಲಭ್ಯವಾಗದಿದ್ದರಿಂದಾಗಿ, ಯಲಬುರ್ಗಾ ತಹಶೀಲ್ದಾರರು ಬಾಲಕಿಯನ್ನು ಮುಂದಿನ ಪೋಷಣೆ ಮತ್ತು ರಕ್ಷಣೆ ಹಿತದೃಷ್ಟಿಯಿಂದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲು ಸಹಕರಿಸಿದ್ದಾರೆ.

# ತೆರಿಗೆ, ITR-U ಫೈಲಿಂಗ್ ಜಾಗೃತಿ

## ನಿರ್ದಿಷ್ಟ ಪ್ರಮಾಣದ ಹಣ ಗಳಿಸುವವರು ಐಟಿ ರಿಟರ್ನ್ಸ್ ಸಲ್ಲಿಕೆ ಕಡ್ಡಾಯ
## ಹಿರಿಯ ನಾಗರಿಕರಿಗೆ ಮುಂಗಡ ತೆರಿಗೆ ಪಾವತಿಯಿಂದ ವಿನಾಯಿತಿ ಇದೆ




■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭಾಂಗಣದಲ್ಲಿ ಮುಂಗಡ ತೆರಿಗೆ ಮತ್ತು ITR-U ಫೈಲಿಂಗ್‌ಗೆ ಮೌಲ್ಯಯುತವಾದ ಜಾಗೃತಿ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಪ್ರಾಸ್ತಾವಿಕವಾಗಿ ಮಾತನಾಡಿ, ಐಟಿಆರ್ ಫೈಲಿಂಗ್ ಎನ್ನುವುದು ತೆರಿಗೆದಾರನು ತನ್ನ ಆರ್ಥಿಕ ವರ್ಷದಲ್ಲಿ ಗಳಿಸಿದ ಒಟ್ಟು ಆದಾಯದ ವರದಿಯನ್ನು ಸಲ್ಲಿಸುವ ಪ್ರಕ್ರಿಯೆಯಾಗಿದೆ. ಆದಾಯ ತೆರಿಗೆ ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ, ಒಬ್ಬ ವ್ಯಕ್ತಿಯು ತಮ್ಮ ರಿಟರ್ನ್ಸ್ ಫೈಲಿಂಗ್ ಅನ್ನು ಪೂರ್ಣಗೊಳಿಸಬಹುದು ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ಅಧಿಕಾರಿಗಳು ತಿಳಿಯಬೇಕು ಎಂದರು.

ಆದಾಯ ತೆರಿಗೆ ಅಧಿಕಾರಿ ಮಲ್ಲಿಕಾರ್ಜುನ ಗೌಡ ಮಾತನಾಡಿ, ಐಟಿಆರ್ ನಿವ್ವಳ ತೆರಿಗೆ ಹೊಣೆಗಾರಿಕೆಯನ್ನು ಘೋಷಿಸಲು, ತೆರಿಗೆ ವಿನಾಯಿತಿಗಳ ಕ್ಲೈಮ್ ಮಾಡಲು ಮತ್ತು ಒಟ್ಟು ತೆರಿಗೆಯ ಆದಾಯವನ್ನು ವರದಿ ಮಾಡಲು ಬಳಸಲಾಗುವ ಒಂದು ರೂಪವಾಗಿದೆ. ನಿರ್ದಿಷ್ಟ ಪ್ರಮಾಣದ ಹಣವನ್ನು ಗಳಿಸುವ ವ್ಯಕ್ತಿಗಳು ಐಟಿ ರಿಟರ್ನ್ಸ್ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಮುಂಗಡ ತೆರಿಗೆಯನ್ನು ಯಾರು ಪಾವತಿಸಬೇಕು? ಸಂಬಳ ಪಡೆಯುವ ವ್ಯಕ್ತಿಗಳು, ಸ್ವತಂತ್ರೋದ್ಯೋಗಿಗಳು ಮತ್ತು ವ್ಯವಹಾರಗಳು- ಒಂದು ಹಣಕಾಸು ವರ್ಷದಲ್ಲಿ ನಿಮ್ಮ ಒಟ್ಟು ತೆರಿಗೆ ಹೊಣೆಗಾರಿಕೆ ರೂ 10,000 ಅಥವಾ ಅದಕ್ಕಿಂತ ಹೆಚ್ಚಿದ್ದರೆ, ನೀವು ಮುಂಗಡ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಮುಂಗಡ ತೆರಿಗೆಯು ಎಲ್ಲಾ ತೆರಿಗೆದಾರರು, ಸಂಬಳ ಪಡೆಯುವ ವ್ಯಕ್ತಿಗಳು, ಸ್ವತಂತ್ರೋದ್ಯೋಗಿಗಳು ತೆರಿಗೆಯನ್ನು ಪಾವತಿಸಬೇಕಾಗುತ್ತದೆ.

ಹಿರಿಯ ನಾಗರಿಕರು ವ್ಯಾಪಾರ ಅಥವಾ ವೃತ್ತಿಯಿಂದ ಯಾವುದೇ ಆದಾಯವನ್ನು ಹೊಂದಿರದ ಹಿರಿಯ ನಾಗರಿಕರಿಗೆ ಮುಂಗಡ ತೆರಿಗೆ ಪಾವತಿಯಿಂದ ವಿನಾಯಿತಿ ಇದೆ ಎಂದು ತಿಳಿಸಿದರು.

ಉಪಾಧ್ಯಕ್ಷರಾದ ಎಸ್.ದೊಡ್ಡನಗೌಡ, ಸೊಂತಗಿರಿಧರ, ಜಂಟಿಕಾರ್ಯದರ್ಶಿಗಳಾದ ಡಾ.ಮರ್ಚೆಡ್ ಮಲ್ಲಿಕಾರ್ಜುನಗೌಡ, ವಿ. ರಾಮಚಂದ್ರ, ನಾಗಳ್ಳಿ ರಮೇಶ, ಜಂಟಿ ಖಜಾಂಚಿ, ಸಿ.ಎಸ್.ಸತ್ಯನಾರಾಯಣ, ಸ್ವಾಗತ ಸಮಿತಿ ಚೇರ್ಮನ್, ಟಿ.ಶ್ರೀನಿವಾಸ ರಾವ್, ಪತ್ರಿಕಾ ಮತ್ತು ಮಾಧ್ಯಮ, ಚೇರ್ಮನ್, ಎಲ್ಲಾ ಪದಾಧಿಕಾರಿಗಳು, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು, ವಿವಿಧ-ಸಂಘ ಸಂಸ್ಥೆಗಳ ಪದಾಧಿಕಾರಿಗಳು ಈ ಕಾರ್ಯಕ್ರದಲ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಅಧ್ಯಕ್ಷ ಬಿ. ಮಹಾರುದ್ರಗೌಡ ಸ್ವಾಗತಿಸಿದರು. ಸಿಎ ರಾಜಶೇಖರ ನಿರೂಪಿಸಿದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ ಸುರೇಶಬಾಬು ವಂದಿಸಿದರು.

# ಪಿಎಂ-ಸೂರಜ್ ಪೋರ್ಟಲ್‌ಗೆ ಚಾಲನೆ

■ ಮೊದಲ ಪುಟದಿಂದ

ರಾಷ್ಟ್ರೀಯ ಪೋರ್ಟಲ್‌ನಿಂದ ಹಿಂದುಳಿದ ವರ್ಗದವರಿಗೆ ಆದ್ಯತೆ ನೀಡುವ ಮೂಲಕ ಸಾಮಾಜಿಕ ಬದ್ಧತೆಯನ್ನು ಕೇಂದ್ರ ಸರ್ಕಾರವು ಸಾಕಾರಗೊಳಿಸುತ್ತಿದೆ ಮತ್ತು ಸಮಾಜದ ಅತ್ಯಂತ ಅಂಚಿನಲ್ಲಿರುವ ವರ್ಗಗಳನ್ನು ಉನ್ನತೀಕರಿಸುವ ಗುರಿಯನ್ನು ಹೊಂದಿದೆ ಎಂದರು.

ಕೆನರಾ ಬ್ಯಾಂಕ್ ಜಿಲ್ಲಾ ಮಾರ್ಗದರ್ಶಿ ವ್ಯವಸ್ಥಾಪಕ ಸೋಮನಗೌಡ ಐನಾಪುರ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಪೋರ್ಟಲ್ ಮೂಲಕ ಅರ್ಹರು ಸುಲಭವಾಗಿ ಸಾಲವನ್ನು ಪಡೆಯಲು ಸಾಧ್ಯವಾಗಲಿದ್ದು, ಇದರಲ್ಲಿ 15 ಲಕ್ಷ ರೂ. ಗಳವರೆಗೆ ವ್ಯಾಪಾರ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಬ್ಯಾಂಕ್‌ಗೆ ಭೇಟಿ ನೀಡುವ ಅಗತ್ಯ ಇರುವುದಿಲ್ಲ. ಈ ಪೋರ್ಟಲ್ ಮೂಲಕವೇ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹೇಳಿದರು.

ಪಿಎಂ ಸೂರಜ್ ಪೋರ್ಟಲ್ ಅಡಿಯಲ್ಲಿ, ಬ್ಯಾಂಕ್‌ಗಳು, ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿಗಳು, ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳ ಮೂಲಕ ಅರ್ಹ ಜನರಿಗೆ ಸಾಲವನ್ನು ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸರಕಾರದ ಯೋಜನೆಗಳಡಿ ಸೌಲಭ್ಯ ಪಡೆದ 30 ಫಲಾನುಭವಿಗಳಿಗೆ ಸಾಲ ಮಂಜೂರಾತಿ ಪತ್ರ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್, ಕರ್ನಾಟಕ ಗ್ರಾಮೀಣಾ ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ಹೆಚ್.ಕೆ.ಗಿರೆಡ್ಡಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಸತೀಶ್, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಭೀಮಪ್ಪ ಎನ್.ಎಸ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಫಲಾನುಭವಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA